ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರೋಪನ್ಯಾಸಮಾಲೆ—೩

ತೆರಿಗೆ

ಬಿ. ಆರ್. ಸುಬ್ಬರಾವ್, ಎಂ.ಎ.

ವೆಸ್ಲಿ ಪ್ರೆಸ್, ಮೈಸೂರು ಸಿಟಿ

೧೯೩೯

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರೋಪನ್ಯಾಸಮಾಲೆ—೩

ತೆರಿಗೆ

ಬಿ. ಆರ್. ಸುಬ್ಬರಾವ್, ಎಂ.ಎ.

ಮೈಸೂರು:
ವೆಸ್ಲಿ ಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸಿನಲ್ಲಿ ಮುದ್ರಿಸಲ್ಪಟ್ಟಿತು
೧೯೩೯

ಮುನ್ನುಡಿ

ಮೈಸೂರು ವಿಶ್ವವಿದ್ಯಾನಿಲಯದ ಛಾನ್ಸೆಲರವರಾದ ಶ್ರೀಮನ್ಮಹಾರಾಜರವರು ಈ ವಿಶ್ವವಿದ್ಯಾನಿಲಯದ ಮೊದಲನೆಯ ಸೆನೆಟ್ ಸಭೆಯ ಆರಂಭೋತ್ಸವವನ್ನು ನೆರವೇರಿಸುವಾಗ ಮಾಡಿದ ಭಾಷಣದಲ್ಲಿಯೂ ಇದರ ಮೊದಲನೆಯ ಪಟ್ಟಪ್ರದಾನೋತ್ಸವದ ಕಾಲದಲ್ಲಿ ಮಾಡಿದ ಭಾಷಣದಲ್ಲಿಯೂ ವಿಶ್ವವಿದ್ಯಾನಿಲಯದ ಇತರ ಕರ್ತವ್ಯಗಳ ಜೊತೆಗೆ ವಿಶೇಷವಾಗಿ ಈ ಎರಡರ ನಿರ್ವಾಹವನ್ನು ಅದಕ್ಕೆ ವಹಿಸಿಕೊಟ್ಟರು: (೧) ಲಲಿತವಾದ ಕನ್ನಡದಲ್ಲಿ ಗ್ರಂಥಗಳನ್ನು ಬರಸಿ ಪ್ರಕಟಿಸುವುದು, ಮತ್ತು ಕನ್ನಡ ಸಾಹಿತ್ಯಕ್ಕೆ ಉತ್ತೇಜನ ಕೊಡುವುದು, (೨) ಮಹಾಸ್ವಾಮಿಯವರ ಪ್ರಜೆಗಳಲ್ಲಿ, ವಿಶ್ವವಿದ್ಯಾನಿಲಯದ ನಿಯತಪರೀಕ್ಷೆಗಳಾಗಿ ಏರ್ಪಟ್ಟ ಪಾಠಪ್ರವಚನಗಳಲ್ಲಿ ಭಾಗಿಗಳಾಗಲು ಹಲವಾರು ಕಾರಣಗಳಿಂದ ಅನುಕೂಲ ಹೊಂದದವರಿಗೆ ಜ್ಞಾನಪ್ರಚಾರ ಮಾಡುವುದು, ಮತ್ತು ಸಂಸ್ಥಾನದ ಎರಡು ಮುಖ್ಯ ನಗರಗಳ ವಿದ್ಯಾಭ್ಯಾಸ ಸೌಕರ್ಯವನ್ನು ಪಡೆಯಲಾರದ ಗ್ರಾಮಾಂತರಗಳವರಿಗೆ ಮೇಲುಮಟ್ಟದ ಸಂಸ್ಕೃತಿಯ ಪರಿಚಯವನ್ನು ಒದಗಿಸಿಕೊಡುವುದು.

ನಮ್ಮ ವಿಶ್ವವಿದ್ಯಾನಿಲಯವು ಉದ್ದಕ್ಕೂ ಈ ಎರಡು ಘನೋದ್ದೇಶಗಳನ್ನೂ ಸಂತತವಾಗಿ ತನ್ನ ದೃಷ್ಟಿಯಲ್ಲಿಟ್ಟುಕೊಂಡೇ ಕೆಲಸಮಾಡುತ್ತಿದೆ. ವಿಶ್ವವಿದ್ಯಾನಿಲಯದ ಗ್ರಂಥಪ್ರಕಟನ ಸಮಿತಿಯವರು ಕನ್ನಡದ ಪ್ರಾಚೀನ ಮಹಾಕಾವ್ಯ

ಸಂಗ್ರಹಗಳನ್ನು ಸಂಶೋಧಿಸಿಯೂ, ಸಾಹಿತ್ಯ ವಿಜ್ಞಾನಗಳಿಗೆ ಸಂಬಂಧಪಟ್ಟ ಸ್ವತಂತ್ರ ಗ್ರಂಥಗಳನ್ನು ಬರಸಿಯೂ ಪ್ರಕಾಶ ಗೊಳಿಸಿದ್ದಾರೆ. ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಸಮಿತಿಯವರು ಸಂಸ್ಥಾನದ ಬೇರೆ ಬೇರೆ ಕಡೆಗಳಲ್ಲಿ ಉಪನ್ಯಾಸ ಗಳನ್ನು ಪ್ರಧಾನವಾಗಿ ಕನ್ನಡದ ಮೂಲಕ ಕೊಡಿಸುವ ಏರ್ಪಾಡು ಮಾಡಿದ್ದಾರೆ.

ಕೆಲವು ವರ್ಷಗಳಿಂದ ಈಚೆಗೆ ಇನ್ನೊಂದು ಮುಖ್ಯವಾದ ರೀತಿಯಲ್ಲಿ ಕಾರ್ಯಕ್ರಮವು ಬೆಳೆದಿದೆ. ವಿವಿಧ ವಿಷಯಗಳ ಮೇಲೆ ಒಂದೊಂದೇ ಉಪನ್ಯಾಸಕೊಟ್ಟು ಮುಗಿಸುವುದರ ಜೊತೆಗೆ, ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದವರ ಸಹಕಾರದಿಂದ, 'ಉಪನ್ಯಾಸ ಸಪ್ತಾಹ'ವೆಂದು ಈಗ ಕರೆಯುತ್ತಿರುವ ಉಪನ್ಯಾಸಮಾಲೆಗಳನ್ನು ಏರ್ಪಡಿಸಲಾಗಿದೆ. ಒಂದೊಂದು ಕೇಂದ್ರದಲ್ಲೂ ಐದಾರು ದಿನಗಳ ತನಕ ಭಾಷಣ ಕಾವ್ಯವಾಚನ ಗಾಯನಗಳನ್ನು ನಡಸಲಾಗಿದೆ; ಉಪನ್ಯಾಸ ಗಳು ಸಾಹಿತ್ಯ ವಿಜ್ಞಾನ ಸಾಮಾಜಿಕ ಮೊದಲಾದ ಎಲ್ಲ ವಿಷಯ ಗಳನ್ನೂ ಒಳಕೊಳ್ಳುತ್ತವೆ. ದೊಡ್ಡಬಳ್ಳಾಪುರ, ದಾವಣಗೆರೆ, ಕೋಲಾರ, ಈ ಮೊದಲಾದ ಕಡೆಗಳಲ್ಲೆಲ್ಲಾ ಈ ಉಪನ್ಯಾಸ ಸಪ್ತಾಹಗಳು ನಡೆದು ಜನರ ಮೆಚ್ಚಿಕೆಯನ್ನು ವಿಶೇಷವಾಗಿ ಪಡೆದಿವೆ.

ನಮ್ಮ ಕಾರ್ಯಕ್ರಮದಲ್ಲಿ ಇನ್ನೂ ಈಚೆಯ ವಿಸ್ತರಣ ವೇನೆಂದರೆ—ಕೆಲವು ಕೇಂದ್ರಗಳನ್ನು ಆರಿಸಿಕೊಂಡು ಆ ಸ್ಥಳ ಗಳಿಗೆ ಒಂದು ವರ್ಷದಲ್ಲಿ ಹಲವು ಬಾರಿ ಹೋಗಿ, ಬೇರೆ ಬೇರೆ ವಿಷಯಗಳನ್ನು ಕುರಿತು ಒಂದೊಂದರ ಮೇಲೂ ಉಪನ್ಯಾಸ ಮಾಲೆಯನ್ನು ಕೊಡಿಸುವುದು. ಹೀಗೆ ಮಾಡುವುದರಿಂದ, ಒಂದು ಸ್ಥಳದ ಜನಗಳು ತಕ್ಕಮಟ್ಟಿಗೆ ದೀರ್ಘವಾದ ಕಾಲಾ

ವಧಿಯಲ್ಲಿ ಉದ್ದಕ್ಕೂ ಆ ವಿಷಯಗಳ ಮೇಲೆ ಹಲವು ಪ್ರವಚನಗಳನ್ನು ಕೇಳಲು ಸಾಧ್ಯವಾಗಿದೆ. ಉಪನ್ಯಾಸಗಳನ್ನು ಯಾವ ಸ್ಥಳದ ಉಪಯೋಗಕ್ಕಾಗಿ ಮೊದಲು ಏರ್ಪಡಿಸಿತ್ತೋ ಅಲ್ಲಿಯವರು ಮಾತ್ರವೇ ಅಲ್ಲದೆ ಹೊರಗಿನವರು ಕೂಡ ಅವುಗಳ ಲಾಭವನ್ನು ಪಡೆಯಲೆಂದು ಈ ಉಪನ್ಯಾಸಗಳನ್ನು ಜೊತೆಗೂಡಿಸಿ ಚಿಕ್ಕ ಕೈಪಿಡಿಗಳ ರೂಪದಲ್ಲಿ ಈಗ ಪ್ರಕಟಿಸಲಾಗಿದೆ.

ಈ ಉಪನ್ಯಾಸಗಳನ್ನು ಕೊಟ್ಟು ಈ ಕೈಪಿಡಿಗಳನ್ನು ರಚಿಸಿದವರ ಹಾರೈಕೆ ಹೆಬ್ಬಯಕೆಗಳು ಇಷ್ಟೇ: ದಯಾಳುಗಳಾದ ಮಹಾಸ್ವಾಮಿಯವರು ವಿಶ್ವವಿದ್ಯಾನಿಲಯಕ್ಕೆ ವಹಿಸಿಕೊಟ್ಟ ಮುಖ್ಯ ಕಾರ್ಯಗಳೆರಡೂ, ಎಂದರೆ ಲಲಿತವೂ ಸರಳವೂ ಆದ ಕನ್ನಡದಲ್ಲಿ ಪುಸ್ತಕಗಳನ್ನು ಬರೆಸಿ ಪ್ರಕಟಿಸುವುದು ಮತ್ತು ಜನಸಾಮಾನ್ಯದಲ್ಲಿ ಮೇಲುಮಟ್ಟದ ಸಂಸ್ಕೃತಿಯನ್ನು ಹರಡುವುದು—ಈ ಎರಡೂ ಈ ಗ್ರಂಥಗಳ ಮೂಲಕ ಜೊತೆಜೊತೆಗೇ ಕೈಗೂಡಲಿ.

ವಿಶ್ವವಿದ್ಯಾನಿಲಯ, ಮೈಸೂರು,
೨೯–೫–೧೯೩೯. } ಎನ್. ಎಸ್. ಸುಬ್ಬರಾವ್.

ಅರಿಕೆ

ಕೆಲವು ತಿಂಗಳ ಹಿಂದೆ ತೆಲುಗಿನ ವಿಷಯವಾಗಿ ತಿರುಮಕೂಡಲು ನರಸೀಪುರದಲ್ಲಿ ನಾನು ಕೊಟ್ಟ ನಾಲ್ಕು ಉಪನ್ಯಾಸಗಳನ್ನು ಕೆಲವು ಬದಲಾವಣೆಗಳೊಡನೆ ಇಲ್ಲಿ ಪ್ರಕಟಿಸಿದೆ. ಉಪನ್ಯಾಸಗಳನ್ನು ಕೊಡಲು ಅವಕಾಶವಿತ್ತ ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದವರಿಗೂ, ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿರುವ ವಿಶ್ವವಿದ್ಯಾನಿಲಯದ ಮುಖ್ಯ ಅಧಿಕಾರಿಗಳಿಗೂ ನಾನು ಕೃತಜ್ಞನಾಗಿರುತ್ತೇನೆ.

ಇದನ್ನು ಪರಿಷ್ಕರಿಸಿ ಮುದ್ರಣಪ್ರತಿಯನ್ನು ಓದಿ ಸಹಾಯ ಮಾಡಿದ ನನ್ನ ಮಿತ್ರರಾದ ಶ್ರೀಮಾನ್ ಡಿ. ಎಲ್. ನರಸಿಂಹಾಚಾರ್ಯರಿಗೂ ಶ್ರೀಮಾನ್ ತೀ. ನಂ. ಶ್ರೀಕಂಠಯ್ಯನವರಿಗೂ ನನ್ನ ವಂದನೆಗಳು.

ಬಿ. ಆರ್. ಸುಬ್ಬರಾವ್.

ವಿಷಯ ಸೂಚಿಕೆ

ಪೀಠಿಕೆ

ಸರ್ಕಾರದ ಹುಟ್ಟುವಳಿ ಮತ್ತು ತೆರಿಗೆ

ಮನುಷ್ಯನು ಸಮಾಜ ಜೀವಿ. ತನ್ನ ಬದುಕು ಸುಖವಾಗಿ ನಡೆಯಬೇಕಾದರೆ ಅವನಿಗೆ ಇತರರ ಸಹವಾಸವೂ ಸಹಾಯವೂ ಬೇಕು. ಅನ್ಯೋನ್ಯ ಸಹಾಯದಿಂದ ಬಾಳುವ ಜನರು ತಮಗೊಂದು ಗೊತ್ತಾದ ವಸತಿಯನ್ನು ಮಾಡಿಕೊಂಡು ಅಲ್ಲಿ ಸಮಾಜವನ್ನು ಏರ್ಪಡಿಸಿಕೊಳ್ಳುತ್ತಾರೆ. ಅಲ್ಲಿ ಜನರು ಹೆಚ್ಚು ಹೆಚ್ಚಾಗಿ ಬೆರೆತು ಕೆಲಸಮಾಡಲಾರಂಭಿಸುವರು. ಸಮಾಜ ಬುದ್ಧಿಯು ಜನರಲ್ಲಿ ಅಂಕುರಿಸಿದ ಮೇಲೆ ಅವರು ದೊಡ್ಡ ದೊಡ್ಡ ಕಾರ್ಯಗಳನ್ನು ನಿರ್ವಾಹಮಾಡುವುದಕ್ಕೂ ತಮ್ಮ ಶ್ರೇಯಸ್ಸನ್ನು ಸಾಧಿಸುವುದಕ್ಕೂ ಅನೇಕ ಸಂಸ್ಥೆಗಳನ್ನೂ ಸಂಘಗಳನ್ನೂ ಏರ್ಪಡಿಸಿಕೊಳ್ಳುವರು. ಇವುಗಳಲ್ಲಿ ಸರ್ಕಾರವೂ ಒಂದು. ಸಮಾಜದ ಹಿತಸಾಧನೆಗಾಗಿಯೂ ಅದರ ಅಭಿವೃದ್ಧಿಗಾಗಿಯೂ ದುಡಿಯುವ ಸಂಸ್ಥೆಗಳಲ್ಲಿ ಇದು ಅತಿ ಪುರಾತನವಾದದ್ದು. ಇದರ ನಿರ್ಮಾಣದಿಂದ ಒಂದು ನಾಡಿನ ಜನರಿಗೆ ಶಾಂತಿಯೂ ನೆಮ್ಮದಿಯೂ ಬರುತ್ತವೆ; ಅವರು ಒಳ್ಳೆಯ ಪ್ರಜೆಗಳಾಗಿ ಅಭಿವೃದ್ಧಿಹೊಂದಲು ಅವಕಾಶವುಂಟಾಗುತ್ತದೆ. ಎಲ್ಲ ಬಗೆಯ ನಾಗರಿಕತೆಗೂ ಸರ್ಕಾರವೇ ಮೂಲ. ಅದು ಸಮಾಜದ ವ್ಯವಸ್ಥೆಗಾಗಿ ಹುಟ್ಟಿದ್ದು.

ಸರ್ಕಾರವನ್ನು ಕೆಲವು ಪಂಡಿತರು ಹೀಗೆ ವರ್ಣಿಸಿದ್ದಾರೆ— "ಸರ್ಕಾರ ಸಮಾಜದ ಕೈ; ರಾಷ್ಟ್ರದ ಕಣ್ಣು; ಪ್ರಜೆಗಳ

ಪ್ರತಿನಿಧಿ; ಪ್ರಜಾಸೇವೆಗಾಗಿ ಪ್ರಜೆಗಳಿಂದ ಏರ್ಪಟ್ಟಿರುವ ಅಧಿಕಾರಮಂಡಲ; ಯಂತ್ರ."

ಸರ್ಕಾರವು ಮಾಡಬೇಕಾದ ಕಾರ್ಯಗಳು ಅನೇಕವಾಗಿವೆ. ಪರದೇಶದ ಶತ್ರುಗಳು ಪ್ರಜೆಗಳನ್ನು ಹಿಂಸೆಪಡಿಸದಂತೆ ನೋಡಿಕೊಳ್ಳಲು ಪ್ರಬಲವಾದ ಸೈನ್ಯ, ದೇಶದಲ್ಲಿ ಕಳ್ಳಕಾಕರ ಹಾವಳಿಯನ್ನು ತಪ್ಪಿಸಿ ದುಷ್ಟರನ್ನು ನಿಗ್ರಹಿಸಿ ಶಿಷ್ಟರನ್ನು ಪಾಲಿಸಲು ತಕ್ಕ ಪೋಲೀಸು ಪಡೆ, ವ್ಯಾಜ್ಯ ವ್ಯವಹಾರಗಳನ್ನು ತೀರಿಸಲು ಕೋರ್ಟುಕಛೇರಿಗಳು, ರೋಗ ಪರಿಹಾರಕ್ಕಾಗಿ ಆಸ್ಪತ್ರೆಗಳು, ವಿದ್ಯಾಪ್ರಚಾರಕ್ಕಾಗಿ ಪಾಠಶಾಲೆಗಳು—ಇವೆಲ್ಲ ಬೇಕು. ದೀನರ ಮತ್ತು ದುರ್ಬಲರ ಉದ್ಧಾರಕ್ಕೂ ಸರ್ಕಾರವೇ ಸಹಾಯ ಮಾಡಬೇಕು. ಹೀಗೆಯೇ ಸರ್ಕಾರವು ದೇಶದ ಸರ್ವತೋಮುಖವಾದ ಅಭಿವೃದ್ಧಿಗಾಗಿ ಅನೇಕ ಕಾರ್ಯಗಳನ್ನು ಕೈಕೊಳ್ಳಬೇಕಾಗುವುದು. ಇವೆಲ್ಲವನ್ನೂ ಚೆನ್ನಾಗಿ ನೆರವೇರಿಸಬೇಕಾದರೆ ಸರ್ಕಾರದ ಬೊಕ್ಕಸ ತುಂಬಿರಬೇಕು. ಸರ್ಕಾರಕ್ಕೆ ಬೇಕಾಗುವ ಹಣವನ್ನು ಅನೇಕ ವಿಧವಾಗಿ ಶೇಖರಿಸಬಹುದು. ಮೊದಲನೆಯದು ಸಂಪಾದನೆಯ ಮಾರ್ಗ; ಎರಡನೆಯದು ಸಾಲದ ಮಾರ್ಗ.

೧. ಸಂಪಾದನೆಯ ಮಾರ್ಗ—

(i) ಕಾಡು, ಗಣಿ ಮುಂತಾದ ಸ್ವಾಭಾವಿಕ ಸಂಪತ್ತಿಯಿಂದ ಬರುವ ಆದಾಯ.

(ii) ನೀರಾವರಿ ಕೆಲಸಗಳು, ವಿದ್ಯುಚ್ಛಕ್ತಿ ಮೊದಲಾದುವುಗಳಿಂದ ಒದಗುವ ಹಣ.

(iii) ಗಂಧದೆಣ್ಣೆ, ಸಾಬೂನು, ಸಕ್ಕರೆ, ಔಷಧಗಳು ಮುಂತಾದ ಕೈಗಾರಿಕೆಗಳಿಂದ ಬರುವ ಲಾಭ.

(iv) ಸಾಮಂತರೂ ಜಹಗೀರುದಾರರೂ ಸರ್ಕಾರಕ್ಕೆ ಸಲ್ಲಿಸುವ ಕಪ್ಪ ಕಾಣಿಕೆಗಳು.

(v) ಯುದ್ಧದಲ್ಲಿ ಸೋತವರು ಗೆದ್ದವರಿಗೆ ತೆರುವ ದಂಡಗಳು ಮತ್ತು ಪರಿಹಾರ ದ್ರವ್ಯ.

(vi) ಭೂ ಕಂದಾಯ, ವರಮಾನದ ತೆರಿಗೆ, ಸುಂಕಗಳು, ಸೇಂದಿ ಆದಾಯ, ಸ್ಟಾಂಪು ಮತ್ತು ರಿಜಿಸ್ಟ್ರೇಷನ್ ಫೀ ಮುಂತಾದ ತೆರಿಗೆಗಳು.

(vii) ಧರ್ಮನಿಧಿ ಮತ್ತು ಅದರ ಆದಾಯ.

(viii) ನಾಣ್ಯ ನೋಟುಗಳನ್ನು ತಯಾರು ಮಾಡುವುದು ಮತ್ತು ಅವುಗಳ ಚಲಾವಣೆಯಿಂದ ಬರುವ ಲಾಭ.

ಮೇಲೆ ಕಾಣಿಸಿರುವ ಮಾರ್ಗಗಳಿಂದ ಪ್ರತಿ ವರ್ಷವೂ ಉತ್ಪನ್ನವಾಗುವ ಆದಾಯವನ್ನು ಸರ್ಕಾರವು ಸಾಧಾರಣವಾಗಿ ತನ್ನ ಕೆಲಸಕ್ಕೆ ಉಪಯೋಗಿಸುತ್ತದೆ.

೨. ಸಾಲದ ಮಾರ್ಗ—

ಹಣ ಸಾಲದೆ ಸರ್ಕಾರವು ಒಂದೊಂದು ವೇಳೆ ಸಾಲವನ್ನು ಮಾಡಬೇಕಾಗುತ್ತದೆ. ಯುದ್ಧ ಒದಗಿದಾಗ ರಕ್ಷಣೆಯ ಕೆಲಸಗಳಿಗೆ ಹೆಚ್ಚು ಹಣ ಬೇಕಾಗಬಹುದು; ಕ್ಷಾಮ, ದುರ್ಭಿಕ್ಷ, ಸಾಂಕ್ರಾಮಿಕ ರೋಗ ಮುಂತಾದುವುಗಳ ನಿವಾರಣೆಗಾಗಿ ಹಣ ಸುರಿಯಬೇಕಾಗಬಹುದು; ರೈಲು, ಅಣೆಕಟ್ಟು, ನಾಲಾ,

ಕಾರ್ಖಾನೆ ಮೊದಲಾದ ಕಾರ್ಯಗಳಿಗೆ ಆರಂಭದಲ್ಲಿ ಹೆಚ್ಚು ಮೂಲಧನ ಬೇಕಾಗಬಹುದು. ಇವಕ್ಕೆಲ್ಲ ಹಣ ಒದಗಿಸಲು ಸಾಲಮಾಡಿದ ಹೊರತು ಬೇರೆ ಮಾರ್ಗ ಇರುವುದಿಲ್ಲ. ಸಾಲ ವನ್ನು ಸಂಗ್ರಹಿಸುವ ರೀತಿ, ತೀರಿಸುವ ಕ್ರಮ, ಅವಧಿ ಮೊದ ಲಾದ ವಿಷಯಗಳ ಪ್ರಸ್ತಾಪ ಇಲ್ಲಿ ಬೇಕಾಗಿಲ್ಲ.

ಸಂಪಾದನೆಯ ಮಾರ್ಗಗಳಲ್ಲಿ ಒಂದಾದ ತೆರಿಗೆಯ ವಿಷಯ ವನ್ನು ಕುರಿತು ಇಲ್ಲಿ ವಿಚಾರಮಾಡಿದೆ. ತೆರಿಗೆಗಳನ್ನು ಏತಕ್ಕೆ ಕೊಡಬೇಕು, ಅವುಗಳನ್ನು ಹೇಗೆ ಹಾಕಬೇಕು, ಅವುಗಳ ನಾನಾ ರೂಪಗಳು—ಇವೇ ಮೊದಲಾದ ಅಂಶಗಳನ್ನು ಮುಂದಿನ ಪುಟಗಳಲ್ಲಿ ತಿಳಿಸಿದೆ.

ದೇಶದಲ್ಲಿ ವಾಸಿಸುವ ಪ್ರತಿಯೊಬ್ಬ ಪ್ರಜೆಯೂ ಅಲ್ಲಿಯ ಸರ್ಕಾರದ ವೆಚ್ಚದ ಭಾರವನ್ನು ಸ್ವಲ್ಪ ಮಟ್ಟಿಗಾದರೂ ಹೊರ ಬೇಕು. ಹಣವನ್ನು ಒದಗಿಸುವುದು ಪ್ರಜೆಯಾದವನ ಕರ್ತವ್ಯ. ಪ್ರಜೆಯು ಹಕ್ಕುಗಳನ್ನು ಅನುಭವಿಸಬೇಕಾದರೆ ಹಕ್ಕಿಗೆ ತಕ್ಕಂತೆ ಅವನು ಜವಾಬ್ದಾರಿಯನ್ನೂ ಹೊರಬೇಕು. ಅದಕ್ಕೆ ತಕ್ಕ ಬೆಲೆಯನ್ನು ಕೊಡಬೇಕು; ತೆರಿಗೆಯನ್ನು ತೆರಬೇಕು. ಬೇಕಾಗು ವಷ್ಟು ಹಣವನ್ನು ಪ್ರಜೆಗಳಿಂದ ಬಲಾತ್ಕಾರವಾಗಿ ವಸೂಲು ಮಾಡುವ ಅಧಿಕಾರ ಸರಕಾರಕ್ಕೆ ಇದೆ; ಪ್ರಜೆಗಳೇ ಆ ಅಧಿಕಾರ ವನ್ನು ಅದಕ್ಕೆ ಕೊಟ್ಟಿದ್ದಾರೆ.

ಅಧ್ಯಾಯ ೧

ತೆರಿಗೆ: ಉದ್ದೇಶ, ಸ್ವರೂಪ, ವಿಂಗಡಣೆ ಮತ್ತು ನಿಯಮಗಳು

(೧) ಉದ್ದೇಶ:

ಸರ್ಕಾರಕ್ಕೆ ಬೇಕಾದ ಹಣವನ್ನು ಪಡೆಯುವುದು ತೆರಿಗೆ ಸಿಸ್ಟಿನ ಮುಖ್ಯ ಉದ್ದೇಶ. ಪ್ರಜೆಗಳ ರೀತಿ ನೀತಿಗಳನ್ನು ಸ್ವಲ್ಪ ಮಟ್ಟಿಗೆ ಬದಲಾಯಿಸುವುದಕ್ಕೂ ತೆರಿಗೆಗಳನ್ನು ವಿಧಿಸುವುದುಂಟು. ದೇಶದಲ್ಲಿ ಉಪಯೋಗಿಸುವ ಕೆಲವು ಪದಾರ್ಥಗಳಿಂದ ಅಲ್ಲಿನ ಜನರಿಗೆ ಕೇಡಾಗುವುದೆಂದು ತೋರಿದಾಗ ಸರಕಾರವು ಅವುಗಳ ಸೇವನೆಯನ್ನು ಹತೋಟಿಯಲ್ಲಿಡುವುದಕ್ಕೆ ತೆರಿಗೆಗಳನ್ನು ಹಾಕುವುದು ವಾಡಿಕೆಯಲ್ಲಿದೆ. ಮದ್ಯಪಾನದಿಂದ ಜನರಿಗೆ ತೊಂದರೆ ಉಂಟೆಂಬುದನ್ನು ಅರಿತು ಮಾದಕದ್ರವ್ಯಗಳ ಮಾರಾಟವನ್ನು ಸರ್ಕಾರವು ಹತೋಟಿಯಲ್ಲಿಡುತ್ತದೆ. ಇದೂ ಅಲ್ಲದೆ ಪರದೇಶಗಳಿಂದ ಬರುವ ಮಾದಕದ್ರವ್ಯಗಳ ಮೇಲೆ ಹೆಚ್ಚಿನ ಸುಂಕವನ್ನು ವಿಧಿಸುತ್ತದೆ. ಅವುಗಳ ಬೆಲೆಯನ್ನು ಹೆಚ್ಚಿಸಿದರೆ ಸಾಧಾರಣ ಜನರು ಅವುಗಳ ಉಪಯೋಗವನ್ನು ಕಡಮೆ ಮಾಡುವರೆಂಬ ಭಾವನೆಯಿಂದ ಈ ವಿಧದ ಆಬ್ಕಾರಿ ಸುಂಕಗಳನ್ನು ಹಾಕುವುದುಂಟು. ಪ್ರಜೆಗಳಲ್ಲಿ ದುಂದುಗಾರಿಕೆಯನ್ನು ಕಡಮೆ ಮಾಡಬೇಕೆಂದು ತೆರಿಗೆಗಳನ್ನು ಹಾಕುವುದುಂಟು. ಜೂಜಿನ ತೆರಿಗೆಯನ್ನು ಈ ಗುಂಪಿಗೆ ಸೇರಿಸಬಹುದು.

ದೇಶದ ಸಂಪದಭಿವೃದ್ಧಿ ಕಾರ್ಯವನ್ನು ಮುಂದುವರಿಸಲು ಪರದೇಶಗಳಿಂದ ಆಮದಾಗಿ ಬರುವ ಪದಾರ್ಥಗಳ ಮೇಲೆ ತೆರಿಗೆ ಹಾಕಿ ಸ್ವದೇಶಿ ಕೈಗಾರಿಕೆಗೆ ಪ್ರೋತ್ಸಾಹ ಕೊಡುವುದುಂಟು. ನಮ್ಮ ದೇಶದಲ್ಲಿ ಹತ್ತಿಬಟ್ಟೆ, ರೇಷ್ಮೆ, ಕಬ್ಬಿಣ ಮತ್ತು ಉಕ್ಕಿನ ಪದಾರ್ಥಗಳ ಕೈಗಾರಿಕೆ—ಇವುಗಳನ್ನು ಅಭಿವೃದ್ಧಿಗೆ ತರಲು ಪರದೇಶಗಳಿಂದ ನಮ್ಮ ದೇಶಕ್ಕೆ ಬರುವ ಈ ಸರಕುಗಳ ಮೇಲೆ ಸುಂಕ ಹೇರಿರುತ್ತಾರೆ. ನಮ್ಮ ದೇಶದಲ್ಲಿಯೇ ತಯಾರಾಗುವ ಸಕ್ಕರೆ ಬೆಂಕಿಕಡ್ಡಿ ಪೊಟ್ಟಣಗಳ ಮೇಲೆ ಹಾಕುವ ಸುಂಕದಿಂದ ಈ ವಿಧದ ಸಹಾಯವುಂಟು. ಸಮಾಜವನ್ನು ಕ್ರಾಂತಿಗೆ ಒಳಪಡಿಸದೆ ಧನಿಕರಿಗೂ ಬಡವರಿಗೂ ಇರುವ ಅಂತರವನ್ನು ತಗ್ಗಿಸಿ ಸಮಾಜ ಸುಧಾರಣೆಯ ಪ್ರಯತ್ನವನ್ನು ತೆರಿಗೆ ಸಿಸ್ತಿನಿಂದ ಸಾಧಿಸುವುದುಂಟು. ಧನಿಕರಿಂದ ಹೆಚ್ಚಿನ ತೆರಿಗೆಗಳನ್ನು ವಸೂಲು ಮಾಡಿ ಆ ಹಣವನ್ನು ಸರ್ಕಾರವು ಬಡವರ ಏಳಿಗೆಗೆ ವೆಚ್ಚ ಮಾಡುತ್ತದೆ. ಕಡಮೆ ಆದಾಯವುಳ್ಳ ಜನರಿಗೆ ಮಾಸಾಶನ ವರ್ಷಾಶನಗಳ ರೂಪದಲ್ಲಿ ಸಹಾಯ ಮಾಡುವುದೂ ಉಂಟು. ಇದರಿಂದ ಸಂಪತ್ತಿನ ವಿನಿಯೋಗದಲ್ಲಿ ತೋರಿಬರುವ ವ್ಯತ್ಯಾಸಗಳನ್ನು ಸ್ವಲ್ಪ ಮಟ್ಟಿಗೆ ಕಡಮೆ ಮಾಡಲು ಸಾಧ್ಯವಾಗುವುದು.

ಮೇಲೆ ಹೇಳಿರುವ ಉದ್ದೇಶಗಳಲ್ಲೆಲ್ಲಾ ಮುಖ್ಯವಾದದ್ದು ಸರ್ಕಾರದ ಬೊಕ್ಕಸಕ್ಕೆ ಹಣ ಬರುವಂತೆ ಮಾಡುವುದು. ಸರ್ಕಾರದ ಹುಟ್ಟುವಳಿಯ ಬಹು ಭಾಗವು ತೆರಿಗೆಯ ರೂಪದಲ್ಲಿ ವಸೂಲಾಗುತ್ತದೆ.

ತೆರಿಗೆ ಹುಟ್ಟುವಳಿಗೂ ಇತರ ವಿಧದ ಹುಟ್ಟುವಳಿಗೂ ಇರುವ ವ್ಯತ್ಯಾಸವನ್ನು ತಿಳಿದರೆ ತೆರಿಗೆಯ ಸ್ವರೂಪವನ್ನು ತಿಳಿಯಲು ಸಾಧ್ಯವಾಗುತ್ತದೆ.

(೨) ಸ್ವರೂಪ:

ಸರ್ಕಾರವು ತನ್ನ ಆಡಳಿತಕ್ಕೆ ಒಳಪಟ್ಟ ಪ್ರಜೆಗಳಿಂದ ಕಡ್ಡಾಯವಾಗಿ ಸಂಗ್ರಹಿಸುವ ಹಣವನ್ನು 'ತೆರಿಗೆ' ಎನ್ನಬಹುದು. ತೆರಿಗೆಯ ಹಣವನ್ನು ಪ್ರಜೆಗಳು ಸಕಾಲದಲ್ಲಿ ಕೊಡದಿದ್ದರೆ, ಅದರ ವಸೂಲಿಗೆ ತಕ್ಕ ಕಾರ್ಯಕ್ರಮವನ್ನು ನಡೆಸುವ ಅಧಿಕಾರವನ್ನು ಸರ್ಕಾರವು ಪಡೆದಿರುತ್ತದೆ. ಉದಾಹರಣೆಗಾಗಿ ಭೂಕಂದಾಯ[1]ವನ್ನು ತೆಗೆದುಕೊಳ್ಳೋಣ. ಎಕರೆಗೆ ಇಷ್ಟು ಎಂದು ಹಾಕಿರುವ ಕಂದಾಯವನ್ನು ರೈತನು ಸಕಾಲದಲ್ಲಿ ಕೊಡಲು ತಪ್ಪಿದರೆ, ಸರ್ಕಾರವು ತನಗೆ ಸಲ್ಲಬೇಕಾದ ಹಣವನ್ನು ಪಡೆಯಲು, ಕಾನೂನು ಮೇರೆಗೆ ನೋಟೀಸು, ಜಪ್ತಿ, ಹರಾಜು ಮುಂತಾದ ಕ್ರಮ ನಡೆಸುತ್ತದೆ. ಇದೇ ರೀತಿ ವರಮಾನದ ತೆರಿಗೆಯನ್ನು ಕೊಡಲು ತಪ್ಪಿದವರನ್ನು ಶಿಕ್ಷೆಗೆ ಗುರಿಪಡಿಸುವ ಅಧಿಕಾರವೂ ಸರ್ಕಾರಕ್ಕುಂಟು. ಆದುದರಿಂದ ತೆರಿಗೆ ವಿಧಿಸುವ ಹಕ್ಕು, ಅದನ್ನು ಕಡ್ಡಾಯವಾಗಿ ವಸೂಲುಮಾಡುವ ಕ್ರಮವೂ ಒಟ್ಟಿಗೆ ಸೇರಿಕೊಂಡಿವೆ. ಸರ್ಕಾರದ ಇತರ ಹುಟ್ಟುವಳಿಯ ವಿಷಯದಲ್ಲಿ ಈ ಕಡ್ಡಾಯದ ನಿಯಮ ಅನ್ವಯಿಸುವುದಿಲ್ಲ.

ತೆರಿಗೆಗಳನ್ನು ಕೊಡುವ ಪ್ರಜೆಗಳು ತಾವು ಕೊಡುವ ಹಣಕ್ಕೂ ತಮಗೆ ಸರ್ಕಾರದಿಂದ ದೊರೆಯುವ ಅನುಕೂಲಗಳಿಗೂ ದಾಮಾಷಾ ಮೇರೆಗೆ ಬೆಲೆ ಕಟ್ಟಲು ಸಾಧ್ಯವಿರುವುದಿಲ್ಲ. ಬೆಲೆ ಎಂಬ ಪದವನ್ನು ಕೇಳಿದರೆ ನಮ್ಮ ಮನಸ್ಸಿನಲ್ಲಿ ಉಂಟಾಗುವ ಭಾವಕ್ಕೂ ತೆರಿಗೆ ಎಂಬ ಪದವನ್ನು ಕೇಳಿದರೆ ಉಂಟಾಗುವ

[1] ಭೂಕಂದಾಯವನ್ನು ತೆರಿಗೆ ಎಂದು ಕೆಲವರು ಹೇಳುತ್ತಾರೆ. ಕೆಲವರು ಗುತ್ತಿಗೆ ಹಣವೆಂದು ಹೇಳುತ್ತಾರೆ. ಈ ವಾದವನ್ನು ಇಲ್ಲಿ ಪ್ರಸ್ತಾಪಿಸಲು ಅವಕಾಶವಿಲ್ಲ. ಇಲ್ಲಿ ಕಂದಾಯವನ್ನು ತೆರಿಗೆ ಎಂದೇ ಭಾವಿಸಿರುತ್ತದೆ.

ಭಾವಕ್ಕೂ ಬಹಳ ವ್ಯತ್ಯಾಸವುಂಟು. ಒಂದು ಸಾಮಾನಿಗೆ ಬೆಲೆ ಕೊಟ್ಟು ಕೊಂಡುಕೊಳ್ಳುವಾಗ ಅದನ್ನು ಕೊಳ್ಳಬೇಕೆಂಬ ಬಲಾತ್ಕಾರವೇನೂ ಇರುವುದಿಲ್ಲ. ಇದೂ ಅಲ್ಲದೆ ಸಾಮಾನಿನಿಂದ ನಮಗೆ ಉಂಟಾಗುವ ಪ್ರಯೋಜನಕ್ಕೆ ಒಂದು ಅಂದಾಜಾ ಬೆಲೆ ಕಟ್ಟುತ್ತೇವೆ. ತಯಾರುಮಾಡುವವನು ಅದಕ್ಕೆ ತಗುಲುವ ವೆಚ್ಚವನ್ನು ಅಂದಾಜುಮಾಡಿ ತನ್ನ ಬೆಲೆಯನ್ನು ನಿರ್ಧರಿಸುತ್ತಾನೆ. ಕೊಳ್ಳುವವರ ಮತ್ತು ಮಾರುವವರ ದರದುಗಳನ್ನು ನೋಡಿಕೊಂಡು ಸಾಮಾನ್ಯವಾಗಿ ಸಾಮಾನಿನ ಬೆಲೆಯು ನಿರ್ಧರವಾಗುವುದು. ತೆರಿಗೆಗಳ ವಿಷಯ ಹೀಗಲ್ಲ. ಸೈನ್ಯ ಮತ್ತು ಪೋಲೀಸ್ ಇಲಾಖೆಗಳಿಂದ ಆಗುವ ಪ್ರಯೋಜನವು ಬಲಿಷ್ಠರು ಮತ್ತು ಭಾಗ್ಯವಂತರಿಗಿಂತ ಬಲಹೀನರಿಗೂ ಬಡವರಿಗೂ ಹೆಚ್ಚು. ಆದರೆ ಈ ಶಾಖೆಗೆ ತಗುಲುವ ವೆಚ್ಚದ ಭಾಗವನ್ನು ತೆರಿಗೆಯ ರೂಪದಲ್ಲಿ ಪ್ರಜೆಗಳಿಂದ ಕೂಡಿಸುವಾಗ ಹಣವಂತರಿಂದಲೇ ಬಹುಭಾಗವನ್ನು ಸಂಗ್ರಹಿಸುತ್ತಾರೆ. ಆದುದರಿಂದ ತೆರಿಗೆಯ ಬೆಲೆಯನ್ನು ಅದರಿಂದಾಗುವ ಪ್ರಯೋಜನದಿಂದ ಅಳೆಯಲು ಸಾಧ್ಯವಿಲ್ಲ.

ಇಲ್ಲಿ ಒಂದು ವಿಷಯವನ್ನು ಗಮನಿಸಬೇಕು. ಸರ್ಕಾರದ ತೆರಿಗೆ ಹುಟ್ಟುವಳಿಯ ವಿಷಯವನ್ನು ವರ್ಣಿಸುವ ವರದಿಗಳಲ್ಲಿ ಕಂದಾಯ ತೆರಿಗೆಯ ಜೊತೆಗೆ ಸ್ಟ್ಯಾಂಪು, ಕೋರ್ಟು ಮತ್ತು ರಿಜಿಸ್ಟ್ರೇಷನ್ ಫೀಗಳ ಆದಾಯವನ್ನು ಸೇರಿಸಿರುವುದು ಕಂಡುಬರುತ್ತದೆ. ಫೀ ರೂಪದ ಹುಟ್ಟುವಳಿಗೂ ತೆರಿಗೆಗೂ ಸ್ವಲ್ಪ ವ್ಯತ್ಯಾಸವುಂಟು. ಸ್ಕೂಲುಗಳಲ್ಲಿ ಓದುವ ಹುಡುಗರು ತಿಂಗಳಿಗೊಂದು ಸಲ ಫೀಜನ್ನು ಕೊಡಬೇಕು. ಈ ಫೀಜಿಗೆ ಗೊತ್ತಾದ ಪ್ರತಿಫಲವಿದೆ. ಸ್ಕೂಲಿಗೆ ಹೋಗದವರು ಇದನ್ನು

ಕೊಡಬೇಕಾಗಿಲ್ಲ. ಫೀಜಿಗೆ ಪಾಠ ಕಲಿಯುವ ಅವಕಾಶವೇ ಪ್ರಯೋಜನ. ಹಾಗೆಯೇ ಕೋರ್ಟುಕಛೇರಿಗಳ ಪ್ರಯೋಜನವನ್ನು ಹೊಂದುವುದಕ್ಕೆ ಕೋರ್ಟು ಫೀ ಕೊಡಬೇಕು. ಹೀಗೆ ಪ್ರಯೋಜನವನ್ನು ಅಪೇಕ್ಷಿಸುವವರಿಂದ ಮಾತ್ರ ಫೀ ರೂಪದ ಆದಾಯ ವಸೂಲಾಗುತ್ತದೆ. ಸಾಧಾರಣವಾಗಿ ಫೀ ಪಾವತಿಯಾದ ಮೇಲೆಯೇ ಅದರ ಪ್ರಯೋಜನವನ್ನು ಪಡೆಯಬಹುದು. ತೆರಿಗೆಯನ್ನಾದರೋ ಪ್ರಯೋಜನವನ್ನು ಅಪೇಕ್ಷಿಸುವವರೂ ಅಪೇಕ್ಷಿಸದವರೂ ಕೊಡಬೇಕು. ನಾಲಾ ನೀರು ತನಗೆ ಬೇಕಿಲ್ಲವೆಂದು ಒಬ್ಬ ರೈತನು ವಾದಿಸಬಹುದು; ಆದರೆ ಸರ್ಕಾರವು ಅವನಿಂದಲೂ ತೆರಿಗೆ ವಸೂಲುಮಾಡುತ್ತದೆ. ಇದರಿಂದ ಫೀಜಿಗೂ ತೆರಿಗೆಗೂ ಇರುವ ವ್ಯತ್ಯಾಸ ಗೊತ್ತಾಗುತ್ತದೆ.

ವ್ಯವಹಾರ ನಡೆಸುವವರಲ್ಲಿ ಒಂದುರೀತಿಯ ಕಟ್ಟಳೆಯನ್ನು ಜಾರಿಗೆ ತರುವ ಉದ್ದೇಶದಿಂದ ಈ ಫೀ ಹುಟ್ಟುವಳಿ ಬಾಬುಗಳನ್ನು ಸರ್ಕಾರದವರು ಏರ್ಪಾಡುಮಾಡುತ್ತಾರೆ. ಸರ್ಕಾರದಿಂದ ಉಂಟಾಗುವ ಕೆಲವು ಸೌಕರ್ಯಗಳು ಪ್ರಜೆಗಳೆಲ್ಲರಿಗೂ ದೊರೆಯುವುವು. ಇವುಗಳಿಗಾಗಿ ತೆರಿಗೆಗಳನ್ನು ಪ್ರಜೆಗಳು ಸಲ್ಲಿಸಬೇಕು. ತೆರಿಗೆಯ ಸ್ವರೂಪವನ್ನು ಮೇಲೆ ಹೇಳಿರುವ ಅಂಶಗಳಿಂದ ಸ್ವಲ್ಪ ಮಟ್ಟಿಗೆ ತಿಳಿಯಬಹುದು.

(೩) ತೆರಿಗೆಗಳ ವಿಂಗಡಣೆ:

ತೆರಿಗೆ ಎಂದೊಡನೆಯೇ ತೆರುವವರು ತಮ್ಮ ಆದಾಯದಲ್ಲಿ ಸ್ವಲ್ಪ ಭಾಗವನ್ನು ಪ್ರಜೆಗಳ ಹಿತಕ್ಕಾಗಿ ತೆಗೆದಿಡಬೇಕೆಂಬ ಸೂಚನೆ ತಲೆದೋರುವುದು. ಒಂದು ದೇಶದ ಪ್ರಜೆಗಳು ಕೃಷಿ, ಕೈಗಾರಿಕೆ, ವ್ಯಾಪಾರ, ಕಸಬು ಮುಂತಾದವುಗಳಿಂದ ಆದಾಯ

ವನ್ನು ಪಡೆಯುವರು. ಕೆಲವರ ಆದಾಯದ ಪ್ರಮಾಣವು ಹೆಚ್ಚಿನದಾಗಿರುತ್ತದೆ. ಇನ್ನು ಕೆಲವರದು ಮಧ್ಯಸ್ಥವಾಗಿರುತ್ತದೆ. ಹೆಚ್ಚು ಜನರದು ತೀರ ಕಡಮೆಯಾಗಿರುತ್ತದೆ. ಈ ರೀತಿ ವೃತ್ತಿಗಳಲ್ಲಿ ಮತ್ತು ಆದಾಯದ ಪರಿಮಾಣದಲ್ಲಿ ಇರುವ ವ್ಯತ್ಯಾಸಗಳಿಗೆ ತಕ್ಕಂತೆ ಬೇರೆ ಬೇರೆ ತೆರಿಗೆಗಳಿರಬೇಕು. ಎಲ್ಲರಿಗೂ ಒಂದೇ ವಿಧದ ತೆರಿಗೆಯನ್ನು ಹಾಕುವುದರಲ್ಲಿ ಅರ್ಥವಿಲ್ಲ. ಹತ್ತು ರೂಪಾಯಿ ಸಂಬಳ ಬರುವವನಿಗೂ ಧನಿಕನಿಗೂ ಸಮಮಾನದ ತೆರಿಗೆಯನ್ನೇ ಹಾಕಿ ಹಣವನ್ನು ಕೂಡಿಸಬೇಕಾದರೆ ಸರ್ಕಾರಕ್ಕೆ ವಸೂಲಿ ತೊಂದರೆಯು ಬಹಳ ಹೆಚ್ಚಾಗುತ್ತದೆ. ತೆರಿಗೆಯ ಹೊರೆಯೂ ಕಣ್ಣಿಗೆ ಗೋಚರವಾಗಿ ಜನರಲ್ಲಿ ಅತೃಪ್ತಿಯುಂಟಾಗುತ್ತದೆ. ಆದ್ದರಿಂದ ತೆರಿಗೆಯಲ್ಲಿ ಬೇರೆ ಬೇರೆ ರೀತಿಗಳು ಮತ್ತು ಪ್ರಮಾಣಗಳು ಇರಬೇಕು. ಇವುಗಳನ್ನೆಲ್ಲ ಆಲೋಚಿಸಿ ತೆರಿಗೆಯ ವಿಂಗಡಣೆಯನ್ನು ಪಂಡಿತರು ಮಾಡಿರುತ್ತಾರೆ. ಒಂದು ಬಗೆಯ ವಿಂಗಡಣೆ ಹೀಗಿದೆ:

೧. **ಜನಗಳ ತೆರಿಗೆ**—ಪ್ರತಿಯೊಬ್ಬ ಪ್ರಜೆಯೂ ಕಡ್ಡಾಯವಾಗಿ ಕೊಡಲೇಬೇಕೆಂದು ವಿಧಿಸಿರುವ ತೆರಿಗೆ. ಹಿಂದಿನ ಕಾಲದಲ್ಲಿ ಪ್ರಚುರವಾಗಿದ್ದ ಜೆಸ್ಸಿಯಾ ಎಂಬ ತಲೆಗಂದಾಯವು ಇದಕ್ಕೆ ಉದಾಹರಣೆ.

೨. **ಆದಾಯದ ತೆರಿಗೆ**—ವರಮಾನದ ತೆರಿಗೆ, ಮೇಲ್ತೆರಿಗೆ ಮೊದಲಾದ ತೆರಿಗೆಗಳು ಈ ಗುಂಪಿಗೆ ಸೇರಿರುತ್ತವೆ.

೩. **ಆಸ್ತಿಪಾಸ್ತಿಗಳ ತೆರಿಗೆ**—ಭೂಕಂದಾಯ, ಮನೆ ಕಂದಾಯ, ಹಕ್ಕುದಾರಿಯ ಆಸ್ತಿಗಳನ್ನು ಪಡೆದವರು ಕೊಡಬೇಕಾದ ಸುಂಕ ಅಥವಾ ತೆರಿಗೆಗಳು ಈ ಗುಂಪಿಗೆ ಸೇರಿವೆ.

೪. **ವ್ಯವಹಾರದ ತೆರಿಗೆ**—ಸ್ಟಾಂಪು, ಕೋರ್ಟ್ ಫೀ, ರಜಿಸ್ಟ್ರೇಷನ್ ಫೀ, ವ್ಯಾಪಾರದ ತೆರಿಗೆ ಸುಂಕಗಳು ಇವೆಲ್ಲಾ ಈ ಗುಂಪಿಗೆ ಸೇರತಕ್ಕವು.

ಈ ವಿಂಗಡಣೆಯಲ್ಲಿ ಕೆಲವು ದೋಷಗಳುಂಟು. ಆದಾಯದ ತೆರಿಗೆ, ಆಸ್ತಿಪಾಸ್ತಿಗಳ ತೆರಿಗೆ ಮತ್ತು ವ್ಯವಹಾರದ ತೆರಿಗೆಗಳನ್ನು ಕೊಡುವವರೂ ಜನರು ತಾನೆ. ಜನಗಳ ತೆರಿಗೆಯೆಂದು ಪ್ರತ್ಯೇಕವಾದ ವಿಂಗಡಣೆ ಏಕೆ? ತಲೆಗಂದಾಯ ವಿಧಿಸುತ್ತಿದ್ದ ಕಾಲದಲ್ಲಿಯೂ ಬೇರೆ ಬೇರೆ ತೆರಿಗೆಗಳನ್ನು ಜನರು ಸಲ್ಲಿಸಬೇಕಾಗಿದ್ದಿತು. ಇದೂ ಅಲ್ಲದೆ ಹೀಗೆ ವಿಂಗಡಣೆಮಾಡುವುದರಲ್ಲಿ ಯಾವ ತತ್ತ್ವವನ್ನು ಗಮನದಲ್ಲಿಟ್ಟು ಮಾಡಿದೆ ಎಂಬುದೂ ತಿಳಿಯುವುದಿಲ್ಲ. ಮೇಲೆ ಹೇಳಿರುವ ಕ್ರಮವನ್ನು ಅನುಸರಿಸುವುದರಿಂದ ಈಗಿನ ಸರ್ಕಾರವು ವಿಧಿಸುವ ಹಲವು ತೆರಿಗೆಗಳನ್ನು ಸುಲಭವಾಗಿ ವಿಂಗಡಿಸಲೂ ಸಾಧ್ಯವಾಗುವುದಿಲ್ಲ. ಈ ಕಾರಣಗಳಿಂದ ಮೇಲಿನ ವಿಂಗಡಣೆ ಸಮರ್ಪಕವಾಗಿಲ್ಲ.

ತೆರಿಗೆಯ ಭಾರ ಯಾರ ಮೇಲೆ ಬೀಳುತ್ತದೆ ಎಂಬುದನ್ನು ದೃಷ್ಟಿಯಲ್ಲಿಟ್ಟು ಅದನ್ನು ಎರಡು ವಿಧವಾಗಿ ವಿಂಗಡಿಸಬಹುದು:

(೧) ಪರೋಕ್ಷವಾದ ತೆರಿಗೆ.

(೨) ಪ್ರತ್ಯಕ್ಷವಾದ ತೆರಿಗೆ.

ಈ ವಿಂಗಡಣೆಯು ಹೆಚ್ಚು ರೂಢಿಯಲ್ಲಿದೆ. ಸಾಮಾನ್ಯವಾಗಿ ಎಲ್ಲರೂ ಇದನ್ನು ಒಪ್ಪುತ್ತಾರೆ.

೧. ಪರೋಕ್ಷವಾದ ತೆರಿಗೆ:

ಕೆಲವು ವರ್ಷಗಳ ಹಿಂದೆ ಮೂರು ಕಾಸಿಗೆ ಕೊಳ್ಳುತ್ತಿದ್ದ ಬೆಂಕಿ ಕಡ್ಡಿ ಪೊಟ್ಟಣಕ್ಕೆ ಈಗ ಒಂದು ದುಡ್ಡು, ಐದು ಕಾಸು, ಆರು

ಕಾಸಾಗಿದೆ. ಹೀಗೆ ಹೆಚ್ಚಾದ ಒಂದು, ಎರಡು, ಮೂರು ಕಾಸು ಗಳನ್ನು ಬೆಂಕಿಕಡ್ಡಿ ಕೊಳ್ಳುವವನೇ ಕೊಡಬೇಕಾಗಿದೆ. ಆದರೆ ಅದನ್ನು ತೆರಿಗೆ ಎಂದು ಅವನು ಕೊಡುವುದಿಲ್ಲ; ಪೊಟ್ಟಣದ ಬೆಲೆ ಎಂದು ಕೊಡುತ್ತಾನೆ. ಸರ್ಕಾರದವರು ೧೯೩೪ರಲ್ಲಿ ತೆರಿಗೆ ಹಾಕಿದ್ದರಿಂದ ಬೆಂಕಿಕಡ್ಡಿಯ ಬೆಲೆ ಹೀಗೆ ಹೆಚ್ಚಾಯಿತು. ತಯಾರಿಸುವವನು ಈ ತೆರಿಗೆಯನ್ನು ಮೊದಲು ಕೊಟ್ಟು, ಬೆಂಕಿಕಡ್ಡಿ ಕೊಳ್ಳುವವರಿಂದ ಸ್ವಲ್ಪ ಸ್ವಲ್ಪವಾಗಿ ವಾಪಸು ಪಡೆಯುತ್ತಾನೆ. ಕೊಳ್ಳುವವರಿಂದಲೇ ಒಂದೊಂದು ಕಾಸಿನಂತೆ ಈ ತೆರಿಗೆಯನ್ನು ನೇರವಾಗಿ ವಸೂಲು ಮಾಡುವುದು ಸರ್ಕಾರಕ್ಕೆ ಕಷ್ಟ; ಹೀಗೆ ಮಾಡುವುದರಿಂದ ವಸೂಲಿಗೆ ಹೆಚ್ಚಿನ ಖರ್ಚು ಆಗುವುದು.

ತೆರಿಗೆಗಳನ್ನು ಹೀಗೆ ಪರೋಕ್ಷವಾಗಿ ವಸೂಲು ಮಾಡುವಾಗ ಅವುಗಳನ್ನು ಕೊಡುವವರು ತಾವು ಕೊಟ್ಟ ಹಣವನ್ನು ಇತರರಿಂದ ಸ್ವಲ್ಪಸ್ವಲ್ಪವಾಗಿ ವಸೂಲುಮಾಡಿ ತೆರಿಗೆ ಭಾರವನ್ನು ಹಂಚಿ ಬಹಳ ಮಟ್ಟಿಗೆ ಹೊರೆಯನ್ನು ತಗ್ಗಿಸಲು ಕಾರಣರಾಗುತ್ತಾರೆ. ಸುಂಕದ ತೆರಿಗೆಗಳು, ವ್ಯಾಪಾರದ ಮೇಲೆ ಹಾಕುವ ತೆರಿಗೆಗಳು ಈ ಗುಂಪಿಗೆ ಸೇರುತ್ತವೆ. ಸಕ್ಕರೆ, ಪೆಟ್ರೋಲ್, ಉಪ್ಪು, ಹೊಗೆ ಸೊಪ್ಪು—ಇವುಗಳ ಮೇಲೆ ಸುಂಕ ಹಾಕಿದರೆ ಈ ಪದಾರ್ಥ ಗಳನ್ನು ತಯಾರುಮಾಡುವವರಿಂದಾಗಲಿ ಮಾರುವವರಿಂದಾಗಲಿ ಮೊದಲು ಸುಂಕವನ್ನು ಸರ್ಕಾರವು ವಸೂಲು ಮಾಡುತ್ತದೆ. ಅನಂತರ ಈ ಪದಾರ್ಥಗಳನ್ನು ಉಪಯೋಗಿಸುವವರು ಸ್ವಲ್ಪ ಸ್ವಲ್ಪವಾಗಿ ಈ ಹಣವನ್ನು ತೆರುವರು. ಬಡವರು ಸರ್ಕಾರಕ್ಕೆ ತೆರಿಗೆ ಸಲ್ಲಿಸಲು ಈ ವಿಧದ ತೆರಿಗೆಗಳಿಂದ ಅನುಕೂಲ ಹೆಚ್ಚು. ಹೀಗೆ ಭಾರವನ್ನು ಒಬ್ಬರಿಂದೊಬ್ಬರಿಗೆ ವರ್ಗಮಾಡಲು ಸೌಕರ್ಯವಿರುವ ತೆರಿಗೆಗಳನ್ನು ಪರೋಕ್ಷ ತೆರಿಗೆಗಳೆಂದು ಕರೆಯುವರು.

೨. ಪ್ರತ್ಯಕ್ಷವಾದ ತೆರಿಗೆ:

ತೆರಿಗೆ ಕೊಡುವವನು ಮೇಲೆ ಹೇಳಿದಂತೆ ಇತರರಿಗೆ ತನ್ನ ಹೊರೆಯನ್ನು ವರ್ಗಮಾಡಲು ಸಾಧ್ಯವಾಗದಿದ್ದರೆ ಅದು ಪ್ರತ್ಯಕ್ಷವಾದ ತೆರಿಗೆ ಎನಿಸುವುದು. ಆದಾಯದ ತೆರಿಗೆ, ಆಸ್ತಿ ಪಾಸ್ತಿಗಳ ತೆರಿಗೆ, ಜಮೀನು ಕಂದಾಯ ಮೊದಲಾದ ತೆರಿಗೆಗಳು ಬಹುಮಟ್ಟಿಗೆ ಈ ಗುಂಪಿಗೆ ಸೇರುತ್ತವೆ.

ಕೆಲವು ವೇಳೆ ಪ್ರತ್ಯಕ್ಷವಾದ ತೆರಿಗೆಗಳನ್ನು ಇತರರಿಗೆ ವರ್ಗಮಾಡಲು ಸಾಧ್ಯವಾಗುವುದು. ಒಂದು ಊರಿನಲ್ಲಿ ಬಹಳ ಜಾಣನಾದ ಒಬ್ಬ ವೈದ್ಯನಿದ್ದು ಅವನ ಆದಾಯದ ಮೇಲೆ ಹೆಚ್ಚಿನ ತೆರಿಗೆಯನ್ನು ವಿಧಿಸಿದರೆ ತಾನು ಕೊಡಬೇಕಾದ ಹಣವನ್ನು ತನ್ನ ರೋಗಿಗಳಿಂದ ಪಡೆಯಲು ಅವನು ಪ್ರಯತ್ನ ಪಡುವನು. ಇತರ ವೈದ್ಯರ ಪೈಪೋಟಿ ಇಲ್ಲದೆಹೋದರೆ ಹೀಗೆ ಮಾಡುವುದು ಸುಲಭ. ಹೀಗೆಯೇ ಸಕ್ಕರೆಯ ವ್ಯಾಪಾರದ ಮೇಲೆ ತೆರಿಗೆ ಹಾಕಿದರೆ ಸಕ್ಕರೆ ಮಾರುವವರು, ತಾವು ಸಲ್ಲಿಸಿದ ಹಣವನ್ನು ಕೊಳ್ಳುವವರಿಂದ ವಾಪಸು ಪಡೆಯಲು ಪ್ರಯತ್ನ ಮಾಡುತ್ತಾರೆ. ಸಕ್ಕರೆಯ ಬೆಲೆ ಹೆಚ್ಚಿ ಅದರ ಉಪಯೋಗವು ಕಡಮೆಯಾಗುವ ಸಂದರ್ಭವು ಒದಗಬಹುದು; ಸಕ್ಕರೆಗೆ ಬದಲು ಬೆಲ್ಲವನ್ನು ಉಪಯೋಗಿಸಬಹುದು. ಹೀಗಾಗುವ ಸಂಭವವು ಒದಗಿದರೆ ಸಕ್ಕರೆಯ ಮೇಲಿನ ತೆರಿಗೆಯ ನಷ್ಟವನ್ನು ಮಾರುವವರಾಗಲಿ ತಯಾರಿಸುವವರಾಗಲಿ ಅನುಭವಿಸಬೇಕಾಗುವುದು. ಇದರಿಂದ ಪ್ರತ್ಯಕ್ಷವಾದ ತೆರಿಗೆಗಳೂ ಒಂದೊಂದು ವೇಳೆ ಪರೋಕ್ಷವಾದ ತೆರಿಗೆಗಳಾಗಿ ಪರಿಣಮಿಸಬಹುದು ಎಂದು ತಿಳಿಯುವುದು. ಪರೋಕ್ಷವಾದ ತೆರಿಗೆಗಳು ಪ್ರತ್ಯಕ್ಷವಾದ ತೆರಿಗೆಗಳೂ ಆಗಬಹುದು. ಆದರೂ ತೆರಿಗೆಗಳನ್ನು ಹಾಕಿದ ಕಾಲದಲ್ಲಿ ಸರ್ಕಾರದ

ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ತೆರಿಗೆಗಳನ್ನು ಪರೋಕ್ಷ, ಪ್ರತ್ಯಕ್ಷ ಎಂದು ಸಾಮಾನ್ಯವಾಗಿ ವಿಂಗಡಿಸಲು ಸಾಧ್ಯ.

(೪) ನಿಯಮಗಳು :

ತೆರಿಗೆಗಳನ್ನು ವಿಧಿಸಲು ಹಿಂದಿನಿಂದಲೂ ಕೆಲವು ನಿಯಮಗಳನ್ನು ಅನುಸರಿಸಿದಂತೆ ಕಂಡುಬಂದಿದೆ. ಅರ್ಥಶಾಸ್ತ್ರಜ್ಞರು ಮುಖ್ಯವಾದ ಕೆಲವು ನಿಯಮಗಳನ್ನು ತಮ್ಮ ಗ್ರಂಥಗಳಲ್ಲಿ ಹೇಳಿರುವರಲ್ಲದೆ ತೆರಿಗೆ ಪದ್ಧತಿಯನ್ನು ಒಟ್ಟಿನಲ್ಲಿ ಒಂದು ದೃಷ್ಟಿಯಿಂದ ನೋಡಬೇಕೆಂಬ ವಿಷಯವನ್ನು ಸ್ಪಷ್ಟವಾಗಿ ತಿಳಿಸಿರುತ್ತಾರೆ. ತೆರಿಗೆಗಳ ನ್ಯಾಯಾನ್ಯಾಯಗಳನ್ನಾಗಲಿ ಗುಣಾವಗುಣಗಳನ್ನಾಗಲಿ ತಿಳಿಯಲು ಕೇವಲ ತೆರಿಗೆ ಕೊಡುವವರ ದೃಷ್ಟಿಯಿಂದಲೇ ನೋಡಿದರೆ ಸಾಲದು. ಸರ್ಕಾರದ ದೃಷ್ಟಿಯಿಂದಲೂ ಸಮಾಜದ ದೃಷ್ಟಿಯಿಂದಲೂ ತೆರಿಗೆಗಳನ್ನು ವಿಮರ್ಶಿಸಬೇಕೆಂಬ ವಿಷಯವನ್ನು ಮರೆಯಬಾರದು. ತೆರಿಗೆ ಕೊಡದೆಯೇ ಸರ್ಕಾರದಿಂದ ದೊರೆಯಬಹುದಾದ ಎಲ್ಲ ಸೌಕರ್ಯಗಳು ದೊರೆತರಂತೂ ಪ್ರಜೆಗಳಿಗೆ ಹೆಚ್ಚಿನ ಸಂತೋಷವೇನೋ ಉಂಟಾಗುತ್ತದೆ. ಆದರೆ ಇದು ಸಾಧ್ಯವೇ ಎಂಬುದನ್ನು ಮಾತ್ರ ಪರ್ಯಾಲೋಚಿಸಬೇಕು. ಹೀಗಿರುವುದರಿಂದ ತೆರಿಗೆಗಳನ್ನು ವಿಧಿಸುವ ವೇಳೆಯಲ್ಲಾಗಲಿ ಇರುವ ತೆರಿಗೆಗಳನ್ನು ಪುನಃ ವಿಮರ್ಶಿಸುವ ಕಾಲದಲ್ಲಾಗಲಿ ಮೇಲೆ ಹೇಳಿರುವ ಮೂರು ದೃಷ್ಟಿಗಳಿಂದಲೂ ನೋಡಬೇಕಲ್ಲದೆ ಆದಷ್ಟು ಮಟ್ಟಿಗೆ ದೃಷ್ಟಿಸಮನ್ವಯಮಾಡಿ ಪರ್ಯಾಲೋಚಿಸುವ ಪ್ರಯತ್ನವನ್ನು ಮಾಡಬೇಕು. ಸರ್ಕಾರದ ಉದ್ದೇಶವನ್ನು ಪ್ರಜೆಗಳೂ ಪ್ರಜೆಗಳ ಹಿತವನ್ನು ಸರ್ಕಾರದವರೂ ತಿಳಿದು ಸಹಕರಿಸಬೇಕು.

ತೆರಿಗೆಗಳ ಗುಣಾವಗುಣಗಳನ್ನು ಸ್ಥೂಲವಾಗಿ ತಿಳಿಯಲು ನಾಲ್ಕು ಸುಪ್ರಸಿದ್ಧವಾದ ನಿಯಮಗಳುಂಟು. ಇವುಗಳನ್ನು ತೆರಿಗೆಯ ಶಾಸ್ತ್ರದ ಸೂತ್ರಗಳೆಂದು ಕರೆಯಬಹುದು:

೧. ತೆರಿಗೆಗಳು ಸಮನಾಗಿರಬೇಕು.

೨. ತೆರಿಗೆಗಳಲ್ಲಿ ಅನುಕೂಲತೆ ಇರಬೇಕು.

೩. ತೆರಿಗೆಗಳು ನಿಶ್ಚಿತವಾಗಿರಬೇಕು.

೪. ತೆರಿಗೆಗಳು ಆದಾಯಕರವಾಗಿರಬೇಕು.

ಈ ನಿಯಮಗಳನ್ನು ಸ್ಥೂಲವಾಗಿ ವಿವರಿಸುವುದು ಮೇಲು.

(೧) ಸಮಾನತೆ

ಪ್ರಜೆಗಳೆಲ್ಲರಿಂದ ಸಮಾನವಾಗಿ ತೆರಿಗೆಯನ್ನು ವಸೂಲು ಮಾಡುವುದೆಂದರೇನು? ಸರ್ಕಾರಕ್ಕೆ ಬೇಕಾದ ಒಟ್ಟು ಹಣವನ್ನು ಧನಿಕರಿಗೂ ಬಡವರಿಗೂ ಒಂದೇ ಸಮನಾಗಿ ಹಂಚಿ ತೆರಿಗೆಗಳನ್ನು ವಿಧಿಸುವುದರಿಂದ ಸಮಾನತೆಯ ನಿಯಮವನ್ನು ಅನುಸರಿಸಿದಂತಾಗುವುದಿಲ್ಲ. ಒಂದು ಲಕ್ಷ ಪ್ರಜೆಗಳಿರುವ ದೇಶದಲ್ಲಿ ಐದು ಲಕ್ಷ ರೂಪಾಯಿಗಳನ್ನು ತೆರಿಗೆಯ ಮೂಲಕ ಕೂಡಿಸಬೇಕೆಂದು ಸರ್ಕಾರವು ನಿಶ್ಚಯಿಸಬಹುದು. ಪ್ರತಿಯೊಬ್ಬ ಪ್ರಜೆಯಿಂದಲೂ ಸರಾಸರಿ ಐದು ರೂಪಾಯಿನಂತೆ ತೆರಿಗೆ ವಸೂಲುಮಾಡುವುದರಿಂದ ಸಮಾನವಾದ ತೆರಿಗೆ ಹಾಕಿದಂತಾಗುವುದಿಲ್ಲ. ಹೀಗೆ ಹಾಕಿದ ತೆರಿಗೆಯ ತೂಕವು ಬಡವರಿಗೆ ಭಾರವಾಗಿರುವುದು; ಧನಿಕರಿಗೆ ಹಗುರವಾಗಿರುವುದು. ಹಾಗಾದರೆ ಸಮನಾದ ತೆರಿಗೆ ಎಂದರೇನು?

ತೆರಿಗೆಯನ್ನು ಕೊಡುವುದರಿಂದ ಪ್ರಜೆಗಳಿಗೆ ಒಂದು ವಿಧವಾದ ನಷ್ಟದ ಭಾವನೆ ತಲೆದೋರುತ್ತದೆ. ತಾನು ಸಂಪಾದಿಸುವ ಅಥವಾ ಅನುಭವಿಸುವ ಆದಾಯದ ಸ್ವಲ್ಪಭಾಗವು ಕಡಮೆಯಾಗುವುದರಿಂದ ತೊಂದರೆಯೂ ಕ್ಲೇಶವೂ ಆಗುವುದು ಸಹಜ. ಹೀಗಾಗುವ ತೊಂದರೆಯು ಆ ಜನರ ಸಂಪತ್ತು, ಸಂಪಾದನೆ, ವೆಚ್ಚ ಮೊದಲಾದುವುಗಳಿಗೆ ಅನುಗುಣವಾಗಿರುತ್ತದೆ. ವರ್ಷಕ್ಕೆ ೧೦೦ ರೂಪಾಯಿ ಸಂಪಾದಿಸುವವನು ೧೦ ರೂಪಾಯಿನಷ್ಟು ತೆರಿಗೆ ಸಲ್ಲಿಸಿದರೆ ಅವನಿಗುಂಟಾಗುವ ಕ್ಲೇಶ ನಷ್ಟಗಳೂ ವರ್ಷಕ್ಕೆ ೧,೦೦೦ ರೂಪಾಯಿ ಸಂಪಾದಿಸುವವನು ಅದೇ ತೆರಿಗೆಯನ್ನು ಕೊಟ್ಟರೆ ಉಂಟಾಗುವ ಕ್ಲೇಶ ನಷ್ಟಗಳೂ ಎಂದಿಗೂ ಸಮಾನವಾಗಿರುವುದಿಲ್ಲ. ಆದಾಯ ಹೆಚ್ಚಿದ ಹಾಗೆಲ್ಲಾ ತೆರಿಗೆ ಕೊಡುವ ಶಕ್ತಿ ಹೆಚ್ಚುವುದು ಸ್ವಾಭಾವಿಕ. ಇದೇ ರೀತಿ ವೆಚ್ಚವು ಕಡಮೆಯಾಗಿ ವರ್ಷಕ್ಕೆ ೧,೦೦೦ ರೂಪಾಯಿ ವರಮಾನವಿರುವ ಏಕಾಂಗಿಗೆ ಹಾಕುವ ತೆರಿಗೆಯೂ ಅಷ್ಟೇ ವರಮಾನವಿದ್ದು ಹೆಚ್ಚು ವೆಚ್ಚ ಮಾಡಬೇಕಾದ ದೊಡ್ಡ ಸಂಸಾರಿಗೆ ಹಾಕುವ ತೆರಿಗೆಯೂ ಒಂದೇ ಆದರೆ ಅದು ಸಮಾನವಾದ ತೆರಿಗೆ ಎಂದು ಹೇಳಲಾಗುವುದಿಲ್ಲ. ತಾನು ಕಷ್ಟಪಟ್ಟು ಸಂಪಾದಿಸುವ ಆದಾಯದಲ್ಲಿ ಸ್ವಲ್ಪ ಭಾಗವನ್ನು ತೆರಿಗೆಯ ರೂಪದಲ್ಲಿ ಕೊಡುವುದರಿಂದ ಉಂಟಾಗುವ ಕ್ಲೇಶವೂ ಇತರರು ಸಂಪಾದಿಸಿದ ಆಸ್ತಿಯಿಂದ ತನಗೆ ಬರುವ ಆದಾಯದಲ್ಲಿ ಕೊಡುವ ತೆರಿಗೆಯಿಂದ ಉಂಟಾಗುವ ಕ್ಲೇಶವೂ ಸಮಾನವಾಗಿರುವುದಿಲ್ಲ. ಆದ್ದರಿಂದ ಶ್ರಮವೂ ನಷ್ಟಭಾವನೆಯೂ ಪ್ರಜಾ ಸಮುದಾಯದಲ್ಲಿ ಸಮಾನವಾಗಿವೆ ಎಂದು ತೋರುವ ರೀತಿಯಲ್ಲಿ ತೆರಿಗೆಗಳನ್ನು ಗೊತ್ತುಮಾಡಿದರೆ, ಸಮಾನತೆಯ ನಿಯಮವನ್ನು ಅನುಸರಿಸಿದಂತಾಗುತ್ತದೆ. ವರಮಾನ

ಹೆಚ್ಚಿದ ಹಾಗೆಲ್ಲಾ ಹೆಚ್ಚಿಸಿದ ದರದ ವರಮಾನ ತೆರಿಗೆಗಳನ್ನು ವಿಧಿಸುವ ಸರ್ಕಾರವು ಸಮಾನತೆಯ ನಿಯಮವನ್ನು ಸ್ವಲ್ಪ ಮಟ್ಟಿಗೆ ಸಾಧಿಸುತ್ತದೆ.

ಒಂದು ವಿಷಯವನ್ನು ನಾವು ಗಮನದಲ್ಲಿಡಬೇಕು. ತೆರಿಗೆ ತೆರುವುದರಿಂದ ಉಂಟಾಗುವ ಭಾವನೆಯನ್ನು ಹಣಕಾಸಿನ ಅಳತೆಕಟ್ಟಿಯಿಂದಲೇ ನಿಕರವಾಗಿ ಅಳೆಯಲು ಸಾಧ್ಯವಿಲ್ಲ; ತೆರಿಗೆಕೊಡುವ ಶಕ್ತಿಯನ್ನು ಸ್ಥೂಲವಾಗಿ ಪತ್ತೆಮಾಡಲು ಮಾತ್ರ ಸಾಧ್ಯವಾಗುವುದು. ಪ್ರಜೆಗಳಲ್ಲಿರುವ ಈ ಶಕ್ತಿಗೆ ಅನುಗುಣವಾಗಿ ತೆರಿಗೆಯನ್ನು ವಿಧಿಸಿ ತೆರಿಗೆಯ ಹೊರೆ ಸಮಾನವಾಗಿರುವಂತೆ ಮಾಡಬಹುದು. ತೆರಿಗೆಕೊಡುವ ಶಕ್ತಿಯನ್ನು ಕಂಡುಹಿಡಿಯಲು ಹಲವು ಉಪಾಯಗಳನ್ನು ಸೂಚಿಸುವುದುಂಟು. ಮೇಲೆ ತಿಳಿಸಿರುವಂತೆ ತೆರಿಗೆ ತೆರಬೇಕಾದವರ ಆದಾಯವು ಅವರ ಶಕ್ತಿಯನ್ನು ತಿಳಿಸುವುದೆಂದು ನಂಬಿಕೆ. ಆದಾಯದಲ್ಲಿ ಕೆಲವು ಭಾಗವನ್ನು ವೆಚ್ಚಮಾಡಿದನಂತರ ನಿಲ್ಲುವ ನಿವ್ವಳ ಆದಾಯವನ್ನು ಗಮನದಲ್ಲಿಟ್ಟು, ಆಸ್ತಿಪಾಸ್ತಿಗಳನ್ನೂ ಜೀವನೋಪಾಯದ ರೀತಿಗಳನ್ನೂ ಗಣನೆಗೆ ತಂದುಕೊಂಡು ತೆರಿಗೆಗಳನ್ನು ವಿಧಿಸುವುದರಿಂದ, ತೆರಿಗೆ ನಿಸ್ತಿನಲ್ಲಿ ಒಂದು ವಿಧದ ಸಮಾನತೆಯನ್ನು ಕಲ್ಪಿಸುವುದು ಸಾಧ್ಯ.

(೨) ಅನುಕೂಲತೆ

ತೆರಿಗೆ ವಸೂಲುಮಾಡುವ ಕಾಲ ಕ್ರಮ ವಿಧಾನಗಳು ಸರ್ಕಾರಕ್ಕೆ ಅನುಕೂಲವಾಗಿರಬೇಕಲ್ಲದೆ, ತೆರಿಗೆದಾರನಿಗೂ ಅನುಕೂಲವಾಗಿರಬೇಕು. ತೆರಿಗೆ ಇಲಾಖೆಯಿಂದ ತೆರಿಗೆ ಸಲ್ಲಿಸುವವನಿಗೆ ಹೆಚ್ಚು ಶ್ರಮ ಉಂಟಾಗದಂತೆ ಸರ್ಕಾರವು ನೋಡಿಕೊಳ್ಳ

ಬೇಕು. ಕೊಡುವುದಕ್ಕೆ ಕೈಯಲ್ಲಿ ಕಾಸಿರುವಾಗ, ಸಂಪಾದಿಸಿದ ದುಡ್ಡು ಕೈಗೆ ಬರುವಾಗ, ತೆರಿಗೆಗಳನ್ನು ವಸೂಲುಮಾಡುವಂತಿರಬೇಕು. ಸುಗ್ಗಿಕಾಲದಲ್ಲಿ ಭೂಕಂದಾಯವನ್ನು ಕಿಸ್ತುಗಳಲ್ಲಿ ವಸೂಲು ಮಾಡುವುದರಿಂದ ಈ ಅನುಕೂಲವು ದೊರೆಯುವುದು. ಸಂಬಳ ಮತ್ತು ಕಂಪೆನಿ ಡಿವಿಡೆಂಡುಗಳು ಬಂದಾಗಲೇ ಆದಾಯ ತೆರಿಗೆಯನ್ನು ಕಟಾಯಿಸಿ ನಿಂತ ಹಣವನ್ನು ಕೈಗೆ ಕೊಡುವುದೂ ಇದಕ್ಕಾಗಿಯೇ. ವಿದೇಶಿ ಪದಾರ್ಥಗಳು ರೇವಿಗೆ ಬಂದೊಡನೆಯೇ ಮಂಡಿ ವ್ಯಾಪಾರ ಮಾಡುವವರಿಂದ ಒಂದೇ ಗಂಟಿನಲ್ಲಿ ಸುಂಕವನ್ನು ವಸೂಲುಮಾಡುವುದೂ ಇದೇ ಉದ್ದೇಶದಿಂದಲೇ. ತೆರಿಗೆ ಸಲ್ಲಿಸುವ ಕಾಲ ಸ್ಥಳ ವಿಧಾನಗಳು ಸರ್ಕಾರ ಪ್ರಜೆಗಳಿಬ್ಬರಿಗೂ ಅನುಕೂಲವಾಗಿರಬೇಕು.

(೩) ನಿಶ್ಚಿತಜ್ಞಾನ

ಕೊಡಬೇಕಾದ ತೆರಿಗೆಯು ಇಷ್ಟೇ ಎಂದು ಪ್ರಜೆ ತಿಳಿಯಬೇಕು ; ಸರ್ಕಾರವು ತಿಳಿಸಬೇಕು. ಇಲ್ಲದಿದ್ದರೆ ತೆರಿಗೆ ವಸೂಲು ಮಾಡುವ ಅಧಿಕಾರಿಗಳು ಮನಸ್ಸಿಗೆ ವಸೂಲು ಮಾಡಲು ಅವಕಾಶವಾಗುತ್ತದೆ. ಯಾವ ರೀತಿ, ಯಾರಿಗೆ, ಯಾವ ಕಾಲದಲ್ಲಿ, ಎಷ್ಟು ತೆರಿಗೆ ಸಲ್ಲಿಸಬೇಕೆಂಬುದು ಸಾಧಾರಣವಾಗಿ ಪ್ರತಿಯೊಬ್ಬ ಪ್ರಜೆಗೂ ಸುಲಭವಾಗಿ ತಿಳಿಯುವಂತೆ ಮಾಡಬೇಕು. ತಾನು ಕೊಡಬೇಕಾದ ತೆರಿಗೆ ಎಷ್ಟೆಂದು ತಿಳಿಯುವುದೇ ದೊಡ್ಡ ಪ್ರಯಾಸವಾಗಬಾರದು. ಸರ್ಕಾರಕ್ಕೂ ಬೇರೆ ಬೇರೆ ಬಾಬುಗಳಿಂದ ಬರುವ ಆದಾಯವಿಷ್ಟೆಂದು ಖಚಿತವಾಗಿ ಗೊತ್ತಾಗುವಂತಿರಬೇಕು. ಹೀಗಿಲ್ಲದಿದ್ದರೆ ಸರ್ಕಾರದ ಆಯವ್ಯಯ ಲೆಕ್ಕದಲ್ಲಿ ತೊಂದರೆಗಳುಂಟಾಗುವುವು.

(೪) ಆದಾಯಕರತ್ವ

ಸರ್ಕಾರವು ತನಗೆ ಹಣಬರಬೇಕೆಂದು ತೆರಿಗೆಗಳನ್ನು ಹಾಕುವುದು. ಆದ್ದರಿಂದ ತೆರಿಗೆಗಳು ಆದಾಯಕರವಾಗಿರಬೇಕೆಂದು ಹೇಳುವುದು ಸಹಜವಾದುದು. ಈ ನಿಯಮವನ್ನು ಮೂರು ಭಾಗವಾಗಿ ವಿಂಗಡಿಸಿ ವಿವರಿಸುವುದು ಮೇಲು:

(೧) ವಸೂಲಿಯಲ್ಲಿ ಮಿತವ್ಯಯ.

(೨) ಜನರ ಸ್ಥಿತಿಗತಿಗಳೊಡನೆ ಹೊಂದಿಕೆ.

(೩) ಅಧಿಕವಾದ ಆದಾಯ ಬರುವಂತಿರುವುದು.

(೧) ತೆರಿಗೆಯನ್ನು ವಸೂಲು ಮಾಡುವ ಖರ್ಚು ಎಂದರೆ, ವಸೂಲಿ ಸಿಬ್ಬಂದಿ ಮೇಲ್ವಿಚಾರಣೆಗಳಿಗೆ ಆಗುವ ವೆಚ್ಚವು ಆದಷ್ಟು ಮಟ್ಟಿಗೆ ಕಡಮೆಯಾಗಿರಬೇಕು. ಖರ್ಚು ಕಡಮೆಯಾಗಬೇಕೆಂದು ವಸೂಲು ಮಾಡುವ ಸಿಬ್ಬಂದಿಯನ್ನು ತಗ್ಗಿಸಿ ಪ್ರಜೆಗಳಿಗೆ ತೊಂದರೆಯಾಗುವಂತೆ ಮಾಡಬಾರದು; ವಸೂಲಿ ಕ್ರಮದಲ್ಲಿ ಕಸೂರಿಗಳಿಗೆ ಅವಕಾಶ ಕೊಡಬಾರದು. ತೆರಿಗೆ ಹಾಕಿ ಬಂದ ಹಣದಲ್ಲಿ ಅರ್ಧಭಾಗವನ್ನು ವಸೂಲಿಗೇ ಖರ್ಚು ಮಾಡಿದರೆ, ಆ ತೆರಿಗೆ ಇದ್ದರೇನು, ಹೋದರೇನು?

(೨) ತೆರಿಗೆ ವರಮಾನವು ಜನರ ಆದಾಯ ಸಂಪತ್ತುಗಳಿಗೆ ಅನುಸಾರವಾಗಿರಬೇಕು. ಜನರ ವರಮಾನ ಹೆಚ್ಚಿದರೆ, ಸರಕಾರದ ತೆರಿಗೆ ಆದಾಯವೂ ಆಯಾಸವಿಲ್ಲದೆ ಹೆಚ್ಚಬೇಕು; ವರಮಾನ ಕುಗ್ಗಿದರೆ ತೆರಿಗೆ ಆದಾಯವೂ ಕುಗ್ಗುವಂತಿರಬೇಕು. ಜನರ ಆದಾಯ ಹೆಚ್ಚಿದರೂ ತೆರಿಗೆ ವರಮಾನ ಹೆಚ್ಚದಿದ್ದರೆ, ಆದರಿಂದ ಸರ್ಕಾರಕ್ಕೆ ನಷ್ಟ; ಆದಾಯ ಕಡಮೆಯಾದರೂ ತೆರಿಗೆ ವರಮಾನ ಇಳಿಯದಿದ್ದರೆ ಅದರಿಂದ ಪ್ರಜೆಗಳಿಗೆ ಕ್ಲೇಶ. ಹೀಗೆ

ತೆರಿಗೆಯು ಜನರ ಆರ್ಥಿಕ ಸ್ಥಿತಿಯನ್ನು ಪ್ರತಿಬಿಂಬಿಸದಿದ್ದರೆ, ಅದು ಒಳ್ಳೆಯ ತೆರಿಗೆ ಎಂದು ಹೇಳಲಾಗುವುದಿಲ್ಲ. ಈ ದೃಷ್ಟಿಯಿಂದ ಭೂಕಂದಾಯದ ಸಿಸ್ತು ಈಗಿರುವ ಕ್ರಮದಲ್ಲಿ ನಿಯಮಬದ್ಧವಾಗಿಲ್ಲವೆನ್ನಬಹುದು. ಭತ್ತದ ಬೆಳೆ ಚೆನ್ನಾಗಿ ಆಗಿ ಧಾರಣೆ ಹೆಚ್ಚಿದಾಗ ಕೊಡುವ ಕಂದಾಯದ ದರವೂ, ಬೆಳೆ ಇಳಿದು ಧಾರಣೆವಾಸಿಗಳು ಕುಗ್ಗಿರುವ ಕಾಲದಲ್ಲಿ ಕೊಡುವ ಕಂದಾಯದ ದರವೂ ಹೆಚ್ಚು ಕಡಮೆ ಈಗ ಒಂದೇ ಆಗಿರುವುದು. ಮೂವತ್ತು ವರ್ಷಗಳಿಗೊಂದು ಸಲ ಕಂದಾಯದ ದರದಲ್ಲಿ ಬದಲಾವಣೆಯಾಗುವುದರಿಂದ, ದೇಶದ ಆರ್ಥಿಕ ಸ್ಥಿತಿಯಲ್ಲಿ ಉಂಟಾಗುವ ಬದಲಾವಣೆಗೂ ಭೂಕಂದಾಯದ ಸಿಸ್ತಿನ ಕ್ರಮಕ್ಕೂ ಸಮನ್ವಯಮಾಡಲು ಅವಕಾಶವು ತೀರ ಕಡಮೆ. ಈ ಕಾರಣದಿಂದ ಭೂಕಂದಾಯದ ಸಿಸ್ತು ಬದಲಾವಣೆಯಾಗಬೇಕೆಂಬ ಕೂಗು ಆಗಾಗ ಕೇಳಿಬರುತ್ತಿದೆ.

(೩) ತೆರಿಗೆಯಿಂದ ಸರ್ಕಾರಕ್ಕೆ ಅಧಿಕವಾದ ಹಣ ಬರುವಂತಿರಬೇಕು. ಸ್ವಲ್ಪ ಆದಾಯವನ್ನು ತರುವ ಅನೇಕ ತೆರಿಗೆಗಳಿಗಿಂತಲೂ ಹೆಚ್ಚಿನ ಆದಾಯವನ್ನು ಕೊಡುವ ಕೆಲವು ತೆರಿಗೆಗಳಿರುವುದು ಮೇಲು. ತೆರಿಗೆ ದರ ಕಡಮೆ ಇದ್ದು ಎಲ್ಲ ಪ್ರಜೆಗಳಿಗೂ ಅನ್ವಯಿಸುವ ಹಾಗಿದ್ದರೆ, ಅದರಿಂದ ಬರುವ ಆದಾಯವು ಬಹಳ. ತೆರಿಗೆ ದರ ಹೆಚ್ಚಾಗಿದ್ದು ಶ್ರೀಮಂತರಿಗೆ ಮಾತ್ರ ಅನ್ವಯಿಸುವಂತಿದ್ದರೂ ಸುಲಭವಾಗಿ ಸರ್ಕಾರವು ಹೆಚ್ಚಿನ ಆದಾಯವನ್ನು ಪಡೆಯಬಹುದು. ಎಲ್ಲರೂ ಉಪಯೋಗಿಸುವ ಪದಾರ್ಥಗಳ ಮೇಲೆ ಹಾಕುವ ಸುಂಕದ ದರ ಕಡಮೆಯಾಗಿರಬೇಕು; ಧನಿಕರು ಕೊಡುವ ತೆರಿಗೆಗಳ ದರ ಹೆಚ್ಚಾಗಿರಬೇಕು.

ಒಂದು ದೇಶದ ತೆರಿಗೆಯ ಸಿಸ್ತು ಮೇಲೆ ಹೇಳಿರುವ ನಿಯಮಗಳಿಗೆ ಅನುಗುಣವಾಗಿದೆಯೇ ಇಲ್ಲವೇ ಎಂದು ವಿಮರ್ಶಿಸುವ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ಮರೆಯಕೂಡದು. ಆ ದೇಶದ ಸ್ಥಿತಿ, ಅಲ್ಲಿರುವ ಪ್ರಜೆಗಳ ಉದ್ಯೋಗಗಳು, ಸಂಪದಭಿವೃದ್ಧಿ ಮಾರ್ಗಗಳು—ಇವುಗಳನ್ನು ಬಿಟ್ಟು ತೆರಿಗೆ ಪದ್ಧತಿಯಿರಲಾರದು. ಒಂದು ತೆರಿಗೆಯಲ್ಲಿ ಕಂಡುಬರುವ ದೋಷಗಳನ್ನು ಬೇರೆ ತೆರಿಗೆಗಳಿಂದ ಸರಿಪಡಿಸಲು ಅವಕಾಶವಿರಬಹುದು. ಇದೂ ಅಲ್ಲದೆ ತೆರಿಗೆ ವಿಧಿಸುವ ಸರ್ಕಾರದ ಸ್ವರೂಪ ಮತ್ತು ರಚನೆಯ ಕಡೆಗೆ ನಾವು ಗಮನಕೊಡಬೇಕು. ಇವೆಲ್ಲವನ್ನೂ ಒಟ್ಟುಗೂಡಿಸಿ ತೆರಿಗೆಯ ಸಿಸ್ತನ್ನು ನೋಡುವುದೇ ಮೇಲು. ಇದರಿಂದ ತೆರಿಗೆಯ ಸಿಸ್ತಿನ ವಿಚಾರದಲ್ಲಿ ನಿಶ್ಚಯವಾದ ತಿಳಿವಳಿಕೆ ಉಂಟಾಗುತ್ತದೆ.

ಅಧ್ಯಾಯ ೨

ತೆರಿಗೆಯ ಹೊರೆ ಮತ್ತು ಪರಿಣಾಮ

೧. ತೆರಿಗೆಯು ಹೊರೆಯೆ?—ಸರ್ಕಾರದ ಆದಾಯದಲ್ಲಿ ಸ್ವಲ್ಪ ಭಾಗವನ್ನಾದರೂ ಪ್ರಜೆಗಳಿಂದ ತೆರಿಗೆಯ ರೂಪದಲ್ಲಿ ಸಂಗ್ರಹಿಸದಿದ್ದರೆ ಅದರ ವಿಷಯದಲ್ಲಿ ಅವರಿಗೆ ಮಮತೆ ಆದರ ಜವಾಬ್ದಾರಿಗಳು ಹುಟ್ಟಲಾರವು. ಒಬ್ಬನು ಒಂದು ಸಂಘಕ್ಕೆ ಚಂದಾ ಹಣವನ್ನು ಕೊಡುತ್ತಾನೆಂದು ಭಾವಿಸೋಣ. ಅವನಿಗೆ ಆ ಸಂಘದಿಂದ ಯಾವ ಯಾವ ಉಪಯೋಗಗಳು ದೊರೆಯ

ಬೇಕೋ ಅವೆಲ್ಲವನ್ನೂ ಪಡೆಯಲು ಹಕ್ಕಿರುತ್ತದೆ. ಸಂಘದ ಕಾರ್ಯ ವ್ಯವಸ್ಥೆ ರೀತಿ ನೀತಿಗಳಲ್ಲಿ ಭಾಗವಹಿಸುವ ಅಧಿಕಾರ ಬರುತ್ತದೆ. ಆದ್ದರಿಂದ ಅವನು ಸಂಘದ ವಿಷಯವನ್ನೆಲ್ಲಾ ಚೆನ್ನಾಗಿ ತಿಳಿಯುತ್ತಾನೆ. ಅದರ ಬೆಳವಣಿಗೆಯಲ್ಲಿ ಅವನು ಆಸಕ್ತಿಯನ್ನು ವಹಿಸುತ್ತಾನೆ. ಅವನು ಉದಾಸೀನನಾದರೆ ಸಂಘವು ಅವನತಿಗೆ ಬರಬಹುದು; ಆದ್ದರಿಂದ ಅವನು ಯಾವಾಗಲೂ ಜಾಗರೂಕತೆಯಿಂದ ವರ್ತಿಸುತ್ತಾನೆ. ಇದಕ್ಕೆಲ್ಲಾ ಕಾರಣ ಅವನು ಚಂದಾ ಹಣವನ್ನು ಸಂಘಕ್ಕೆ ಸಲ್ಲಿಸಿರುವುದು. ಸಣ್ಣ ಸಂಘದ ವಿಷಯದಲ್ಲಿಯೇ ಹೀಗಿದ್ದರೆ ಸರ್ಕಾರದ ವಿಷಯ ಇನ್ನೂ ದೊಡ್ಡದಾದದ್ದು. ಸರ್ಕಾರಕ್ಕೆ ತೆರಿಗೆ ಸಲ್ಲಿಸಿರುವುದರಿಂದ ಪ್ರಜೆಯು ಅದರ ಕಾರ್ಯಕಲಾಪಗಳಲ್ಲಿ ಭಾಗ ವಹಿಸುವ ಅಧಿಕಾರವನ್ನೂ ಆಸಕ್ತಿಯನ್ನೂ ಅದು ತನ್ನದೇ ಎಂಬ ಭಾವವನ್ನೂ ಪಡೆಯಲು ಅವಕಾಶವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ ಪ್ರಜೆಯೂ ತೆರಿಗೆ ಸಲ್ಲಿಸಲೇಬೇಕು. ತೆರಿಗೆ ಕೊಡುವುದೂ ಒಂದು ಹಕ್ಕುಬಾಧ್ಯತೆ. ತೆರಿಗೆಯನ್ನು ಹೊರೆ ಎಂದು ಭಾವಿಸಬಾರದು.

ಸಂಪಾದನೆಯ ಶಕ್ತಿ ಒಬ್ಬೊಬ್ಬರಲ್ಲಿ ಒಂದೊಂದು ರೀತಿಯಾಗಿರುತ್ತದೆ; ಹಾಗೆಯೇ ತೆರಿಗೆ ಕೊಡುವ ಶಕ್ತಿಯೂ ಅವರವರ ಆದಾಯಕ್ಕೆ ಹೊಂದಿಕೊಂಡಿರುತ್ತದೆ. ಆದ್ದರಿಂದ ಆದಾಯದ ಪ್ರಮಾಣವನ್ನು ತಿಳಿದುಕೊಂಡರೆ ಅದಕ್ಕೆ ಯಾವ ಪ್ರಮಾಣದ ತೆರಿಗೆ ಬೀಳಬೇಕೆಂದು ಗೊತ್ತಾಗುತ್ತದೆ. ಈ ಪ್ರಮಾಣಕ್ಕಿಂತ ತೆರಿಗೆ ಹೆಚ್ಚಾದರೆ ಅದು ಹೊರೆಯಾಗಿ ಪರಿಣಮಿಸುತ್ತದೆ. ಇದನ್ನು ನಿರ್ಧರಿಸಲು ಕೆಲವು ವಿಷಯಗಳನ್ನು ನೆನಪಿನಲ್ಲಿಡಬೇಕು:

(೧) ಪ್ರಜೆಯ ಸರಾಸರಿ ಆದಾಯ ಮತ್ತು ಆಸ್ತಿಯ ವಿವರವನ್ನು ಮೊದಲು ತಿಳಿಯಬೇಕು.

(೨) ಪ್ರಜೆಯ ಸರಾಸರಿ ಖರ್ಚು ತಿಳಿಯಬೇಕು. ನೆಮ್ಮದಿಯಿಂದ ಬದುಕುವುದಕ್ಕೆ ಯಾವ ಅನುಕೂಲಗಳಿರಬೇಕೋ ಅವಕ್ಕೆ ಬೇಕಾಗುವ ಹಣವನ್ನು ಈ ಖರ್ಚಿನಲ್ಲಿ ಸೇರಿಸಬಹುದು.

(೩) ಮೇಲೆ ಹೇಳಿರುವ ಖರ್ಚನ್ನೆಲ್ಲಾ ಅವನ ಆದಾಯದಿಂದ ಕಳೆದು ಉಳಿತಾಯವಾಗುವ ಎಲ್ಲ ಹಣದ ಮೇಲೂ ತೆರಿಗೆಯನ್ನು ಹೇರಬಾರದು. ದೇಶದ ಸಂಪದಭಿವೃದ್ಧಿ ಕಾರ್ಯವು ಮುಂದುವರಿಯುವುದಕ್ಕೆ ಮೂಲಧನ ಅಗತ್ಯ. ಈ ಮೂಲಧನ ಪ್ರಜೆಗಳಿಂದಲೇ ಬರುವಂತಿರಬೇಕು. ಆದ್ದರಿಂದ ಇಂಥ ಉದ್ಯಮಗಳಲ್ಲಿ ಭಾಗಿಯಾಗಲು ಪ್ರಜೆಯು ಹಣವನ್ನು ಕೂಡಿಡಬೇಕು. ಇದಕ್ಕೆ ಅವಕಾಶವನ್ನು ಕೊಟ್ಟು ಅನಂತರ ನಿಲ್ಲುವ ಹಣದ ಮೇಲೆ ತೆರಿಗೆಯನ್ನು ವಿಧಿಸಬಹುದು.

ಪ್ರಜೆಯ ಒಟ್ಟು ಆದಾಯದಲ್ಲಿ ಮೇಲೆ ಹೇಳಿರುವ ಉದ್ದೇಶಗಳಿಗೆ ಬೇಕಾಗುವಷ್ಟು ಹಣವನ್ನು ಅವನ ಸ್ವಂತಕ್ಕೇ ಬಿಟ್ಟು ಉಳಿದ ಭಾಗವನ್ನು ಸರ್ಕಾರವು ತೆರಿಗೆಯ ಮೂಲಕ ಶೇಖರಿಸಬಹುದು. ಇದಕ್ಕಿಂತಲೂ ಹೆಚ್ಚು ತೆರಿಗೆಯನ್ನು ಹಾಕಿದರೆ, ಅದು ಹೊರೆಯಾಗಿ ಪರಿಣಮಿಸುತ್ತದೆ.

ತೆರಿಗೆಯ ಭಾರವನ್ನು ನಿರ್ಣಯಿಸಲು ಹಣಕಾಸಿನ ದೃಷ್ಟಿ ಒಂದೇ ಸಾಲದು. ಪ್ರಜೆಗಳ ಮನಸ್ಸಿನಲ್ಲಿ ಉಂಟಾಗುವ ಭಾವಗಳನ್ನೂ ತಿಳಿಯಲು ಪ್ರಯತ್ನಪಡಬೇಕು. ಅವರ ಉತ್ಸಾಹವು ತಗ್ಗಬಹುದು; ಅಧಿಕವಾದ ತೆರಿಗೆಯಿಂದ ಅವರಲ್ಲಿ ಅಸಮಾಧಾನ ಮೂಡಬಹುದು. ಇದರಿಂದ ಕ್ರಾಂತಿ ಚಳವಳಿ ಮುಂತಾದುವು ತಲೆದೋರಬಹುದು. ತೆರಿಗೆ ಹಣದ ವಿನಿಯೋಗ, ವಸೂಲಿಯ

ಮತ್ತು ಖರ್ಚಿನ ರೀತಿ ನೀತಿಗಳು, ಸರ್ಕಾರದ ರಚನೆ ಇವೇ ಮೊದಲಾದ ವಿಷಯಗಳನ್ನೂ ಪರ್ಯಾಲೋಚಿಸಬೇಕು.

ತೆರಿಗೆಯು ಕಡೆಯಲ್ಲಿ ಯಾರ ತಲೆಯ ಮೇಲೆ ಬೀಳುವುದು ಎಂಬ ವಿಷಯವನ್ನು ವಿಚಾರಮಾಡುವುದು ಬಹು ಮುಖ್ಯವಾದುದು. ಅದನ್ನು ಸರ್ಕಾರಕ್ಕೆ ಸಲ್ಲಿಸುವವರೇ ಅದರ ಭಾರವನ್ನು ಹೊರುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ವಸೂಲಿಯ ಸೌಕರ್ಯಕ್ಕೋಸ್ಕರ ಕೆಲವರಿಂದ ಮಾತ್ರ ತೆರಿಗೆಗಳನ್ನು ಸರ್ಕಾರವು ತೆಗೆದುಕೊಳ್ಳುತ್ತದೆ. ಸರ್ಕಾರಕ್ಕೆ ಹಣವನ್ನು ಸಲ್ಲಿಸಿದನಂತರ ಅವರು ಆ ಹಣವನ್ನು ಇತರರಿಂದ ಸಂಗ್ರಹಿಸಲು ಪ್ರಯತ್ನಪಡುವರು. ಪರೋಕ್ಷವಾದ ತೆರಿಗೆಗಳಿಗೂ ಪ್ರತ್ಯಕ್ಷವಾದ ತೆರಿಗೆಗಳಿಗೂ ಇರತಕ್ಕ ವ್ಯತ್ಯಾಸವನ್ನು ಸೂಚಿಸಿದಾಗ ಈ ವಿಷಯವನ್ನು ವಿಶದಪಡಿಸಿರುತ್ತದೆ. ತೆರಿಗೆಗಳಿಗೆ ಚಲನಶಕ್ತಿಯುಂಟು. ಸಕ್ಕರೆಯ ಮೇಲೆ ಸುಂಕ ಹಾಕಿದರೆ, ಸಕ್ಕರೆ ಮಾರುವವರಿಂದ ಮೊದಲು ಆ ಸುಂಕ ವಸೂಲಾದರೂ ಮಾರುವವರು ಕೊಳ್ಳುವವರಿಂದ ತಾವು ಕೊಟ್ಟ ಸುಂಕದ ಮೊತ್ತವನ್ನು ವಸೂಲುಮಾಡಿಕೊಳ್ಳುವರು. ತೆರಿಗೆಗಳು ಕಟ್ಟಕಡೆಯಲ್ಲಿ ಯಾರ ಮೇಲೆ ಬೀಳುತ್ತವೆ ಎಂಬ ವಿಷಯವನ್ನು ತಿಳಿಯಬೇಕು. ತೆರಿಗೆಯ ನಿಲುಗಡೆಯನ್ನು ತಿಳಿಯದೆ ಅದರ ಹೊರೆಯನ್ನು ಸರಿಯಾಗಿ ನಿರ್ಧರಿಸಲು ಸಾಧ್ಯವಲ್ಲ.

ದೇಶದ ಒಟ್ಟು ತೆರಿಗೆಯ ಹಣವನ್ನು ಅಲ್ಲಿನ ಪ್ರಜಾಸಂಖ್ಯೆಯಿಂದ ಭಾಗಿಸಿ ಸರಾಸರಿ ತೆರಿಗೆ ಹೊರೆಯನ್ನು ಗೊತ್ತುಮಾಡುವರು; ಆ ದೇಶದ ಜನರ ಸರಾಸರಿ ಆದಾಯಕ್ಕೂ ತೆರಿಗೆಗೂ ಇರುವ ಪ್ರಮಾಣವನ್ನು ನಿಶ್ಚಯಿಸುವರು. ಈ ಹೊರೆಯನ್ನು ಮತ್ತೊಂದು ದೇಶದ ತೆರಿಗೆ ಹೊರೆಯೊಡನೆ ಹೋಲಿಸಿ ಇಲ್ಲಿ

ಹೆಚ್ಚು ಅಲ್ಲಿ ಕಡಮೆ ಎಂದು ಮುಂತಾಗಿ ಟೀಕೆ ಮಾಡುವುದು ಶಾಸ್ತ್ರಸಮ್ಮತವಾದುದಲ್ಲ. ಮೇಲೆ ಹೇಳಿರುವ ವಿಷಯಗಳನ್ನೆಲ್ಲ ತಿಳಿದು ವಿಮರ್ಶಿಸಿದರೆ ಒಳ್ಳೆಯದು.

ತೆರಿಗೆಗಳೆಲ್ಲ ಹೇಯವಾದುವೆಂದು ಭಾವಿಸುವುದು ತಪ್ಪು. ಸಾಮಾನ್ಯವಾಗಿ ಜನರಿಗೆ ಕೇಡನ್ನುಂಟುಮಾಡುವ ಕೆಲವು ಸಾಮಗ್ರಿಗಳ ಮೇಲೆ ತೆರಿಗೆಯನ್ನು ಹಾಕಿ ಆ ಪದಾರ್ಥಗಳ ಸೇವನೆಯನ್ನು ಕಡಮೆ ಮಾಡಿದರೆ ಅಂತಹ ತೆರಿಗೆಯನ್ನು ತಪ್ಪಾದುದೆಂದು ಹೇಳಲು ಸಾಧ್ಯವೇ? ಧನಿಕರಿಂದ ಹೆಚ್ಚಿನ ದರದಲ್ಲಿ ತೆರಿಗೆ ಸಂಗ್ರಹಿಸಿ, ಆ ದ್ರವ್ಯವನ್ನು ಬಡವರ ಉದ್ಧಾರಕ್ಕಾಗಿ ಉಪಯೋಗಿಸಿ, ದೇಶದ ಸಂಪತ್ತು ಹೆಚ್ಚಲು ಅವಕಾಶ ಕಲ್ಪಿಸಿ, ಸಮಾಜದ ಆದಾಯದ ಹಂಚಿಕೆ ಕ್ರಮವನ್ನು ಉತ್ತಮಪಡಿಸಿ, ಜನಜೀವನದ ಅಂತಸ್ತು ಮೇಲಕ್ಕೇರುವಂತೆ ಮಾಡುವ ತೆರಿಗೆ ಸಿಸ್ತನ್ನು ಹೇಯವೆಂದು ಭಾವಿಸುವುದು ಹೇಗೆ ಸಾಧ್ಯ?

೨. **ಪರಿಣಾಮ**—ಇನ್ನು ತೆರಿಗೆ ಸಿಸ್ತಿನಿಂದ ಸಮಾಜದಲ್ಲುಂಟಾಗುವ ಬದಲಾವಣೆಗಳನ್ನು ನೋಡಬಹುದು. ಇದರಿಂದ ಸಮಾಜದ ಆರ್ಥಿಕ ಸ್ಥಿತಿ ಉತ್ತಮಗೊಳ್ಳಲೂ ಬಹುದು; ಕುಗ್ಗಲೂ ಬಹುದು. ಸಂಪದಭಿವೃದ್ಧಿ ವ್ಯವಸ್ಥೆ ಬದಲಾವಣೆ ಹೊಂದಬಹುದು. ಹೊರದೇಶದಿಂದ ಬರುವ ಸಾಮಾನುಗಳ ಮೇಲೆ ಸುಂಕ ಹೇರಿದರೆ ಅವು ಬರುವುದು ಕಡಮೆಯಾಗಿ ನಾಡಿನ ಕೈಗಾರಿಕೆಗಳು ಅಭಿವೃದ್ಧಿ ಹೊಂದುತ್ತವೆ. ಇಲ್ಲಿನ ಕೈಗಾರಿಕೆಗೆ ಬೇಕಾದ ಹಸಿ ಪದಾರ್ಥಗಳು ದೇಶದಿಂದ ಹೊರಕ್ಕೆ ರಫ್ತಾಗುವಾಗ ಆ ಪದಾರ್ಥಗಳ ಮೇಲೆ ಸುಂಕ ಹಾಕಿದರೆ, ಅವು ಹೋಗುವುದು ಕಡಮೆಯಾಗಿ ನಮ್ಮಲ್ಲಿಯೇ ಉಳಿದು ಉಪಯೋಗಕ್ಕೆ ಬರುತ್ತವೆ; ಕೈಗಾರಿಕೆ ಅಭಿವೃದ್ಧಿ ಹೊಂದಲು ಅನುಕೂಲವಾಗು

ತ್ತದೆ. ತೆರಿಗೆಯ ದರಗಳು ಜಾಸ್ತಿಯಾದರೆ ಸಂಪಾದನೆಯ ಶಕ್ತಿಯೂ ಉತ್ಸಾಹವೂ ಕುಗ್ಗುವುವು; ಬಂಡವಾಳವು ತಗ್ಗುವುದು; ಪರದೇಶಗಳಿಗೆ ಬಂಡವಾಳವು ರಫ್ತಾಗುವುದೂ ಉಂಟು. ಸಕ್ಕರೆಯ ಮೇಲೆ ಅತಿಯಾದ ಸುಂಕ ಹೇರಿದರೆ, ಅದರ ಬೆಲೆ ಜಾಸ್ತಿಯಾಗಿ ಕೊಳ್ಳುವವರಿಲ್ಲದೆ ಸಕ್ಕರೆ ಕೈಗಾರಿಕೆ ಹೀನಸ್ಥಿತಿಗೆ ಬರಬಹುದು. ಇದಕ್ಕೆ ಸಂಬಂಧಪಟ್ಟ ಇತರ ಕೈಗಾರಿಕೆಗಳೂ ಕ್ಷಯಿಸುವುವು; ಕಬ್ಬನ್ನು ಬೆಳೆದು ಜೀವಿಸುವವರ ಸ್ಥಿತಿಯೂ ಕೆಡುವುದು. ಹೀಗೆ ತೆರಿಗೆಗಳನ್ನು ಸಂಗ್ರಹಿಸುವ ರೀತಿನೀತಿಗಳಿಂದ ದೇಶದ ಸಂಪತ್ತಿಯ ಉತ್ಪತ್ತಿ ಕ್ರಮದಲ್ಲಿ ಬದಲಾವಣೆಗಳು ಆಗುತ್ತವೆ. ಉತ್ಪತ್ತಿಗೆ ಸಾಧನವಾದ ಬಂಡವಾಳ ಮತ್ತು ಕೆಲಸಗಾರರು ಇವೇ ಮೊದಲಾದುವುಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸುವುದರಿಂದ ದೇಶದ ಸಂಪದಭಿವೃದ್ಧಿ ಕಾರ್ಯದಲ್ಲಿ ವ್ಯತ್ಯಾಸಗಳುಂಟಾಗುತ್ತವೆ.

ಸಂಪತ್ತಿಯ ಹಂಚಿಕೆಯಲ್ಲಿಯೂ ಬದಲಾವಣೆಗಳುಂಟಾಗುತ್ತವೆ. ಬಡವರಿಗೂ ಶ್ರೀಮಂತರಿಗೂ ಇರುವ ಅಂತರವು ಕಡಮೆಯಾದ ಹಾಗೆಲ್ಲಾ ಸಂಪತ್ತಿಯ ಹಂಚಿಕೆ ಸರಿಯಾಗುತ್ತದೆಯೆಂದು ಹೇಳಬಹುದು. ಆದಾಯದ ತೆರಿಗೆಯನ್ನು ತೆಗೆದುಕೊಳ್ಳೋಣ. ಆದಾಯವು ಜಾಸ್ತಿಯಾದ ಹಾಗೆಲ್ಲಾ ತೆರಿಗೆಯ ದರವೂ ಏರುತ್ತದೆ. ಹೆಚ್ಚು ಸಂಪಾದಿಸುವವನು ತನ್ನ ಆದಾಯದಲ್ಲಿ ಹೆಚ್ಚಿನ ಭಾಗವನ್ನು ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಅವನಿಗೆ ಉಳಿಯುವ ಆದಾಯ ಕಡಮೆಯಾಗುತ್ತದೆ. ಆಸ್ತಿವಂತರೂ ಇದೇ ರೀತಿ ತಮ್ಮ ಆಸ್ತಿ ಹೆಚ್ಚಿದ ಹಾಗೆಲ್ಲಾ ಹೆಚ್ಚಿನ ದರದ ತೆರಿಗೆಯನ್ನು ಕೊಡಬೇಕಾಗುವುದು. ಹೀಗೆ ಅವರಿಂದ ವಸೂಲಾದ ಹಣವನ್ನು ಬಡವರ ಉಪಯೋಗಕ್ಕೆ ಸರ್ಕಾರವು ವಿನಿಯೋಗಿಸ

ಬಹುದು. ಇದರಿಂದ ಬಡವರಿಗೂ ಶ್ರೀಮಂತರಿಗೂ ಇರುವ ಅಂತರ ಸ್ವಲ್ಪ ಕಡಮೆಯಾಗುತ್ತದೆ. ಹೀಗೆ ಸಂಪತ್ತು ಆದಾಯಗಳ ಉತ್ಪತ್ತಿ ಮತ್ತು ಹಂಚಿಕೆಯನ್ನು ಹದ್ದಿನಲ್ಲಿರಿಸುವುದಕ್ಕೆ ತೆರಿಗೆ ನಿಸ್ತು ಸಹಾಯಮಾಡುತ್ತದೆ.

ಆರ್ಥಿಕ ದೃಷ್ಟಿಯಿಂದಲೂ ಸಾಮಾಜಿಕ ದೃಷ್ಟಿಯಿಂದಲೂ ತನ್ನ ಪ್ರಜೆಗಳಿಗೆ ಪ್ರಯೋಜನವು ಹುಟ್ಟಿ ಅನ್ಯಾಯವೂ ಕೇಡೂ ಕಡಮೆಯಾಗುವಂತೆ ಸರ್ಕಾರವು ತೆರಿಗೆಗಳನ್ನು ವಿಧಿಸಬಹುದು. ಜನಜೀವನವನ್ನು ಉತ್ತಮಗೊಳಿಸಲು ಅದು ಸಹಕಾರಿಯಾಗುವುದು.

ಅಧ್ಯಾಯ ೩

ಮೈಸೂರು ತೆರಿಗೆ

ನಮ್ಮ ಸಂಸ್ಥಾನದ ಹುಟ್ಟುವಳಿಗೆ ಸಂಬಂಧಪಟ್ಟ ಕೆಲವು ಅಂಶಗಳನ್ನು ಮಾತ್ರ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

(೧) ಒಟ್ಟು ಹುಟ್ಟುವಳಿ

ಈಗ ಮೈಸೂರು ಸರ್ಕಾರದ ಒಟ್ಟು ಹುಟ್ಟುವಳಿ ಸುಮಾರು ೩.೭೫ ಲಕ್ಷ ರೂಪಾಯಿಗಳು. ಈ ಶತಮಾನದ ಆದಿಭಾಗದಲ್ಲಿ ಹುಟ್ಟುವಳಿ ೧೯೨ ಲಕ್ಷ ರೂಪಾಯಿಗಳು ಮಾತ್ರವಾಗಿತ್ತು. ಎರಡು ಕೋಟಿಗೆ ಕಡಮೆಯಾಗಿದ್ದ ವರಮಾನವು ನಾಲ್ಕು ಕೋಟಿಯ ಮಿತಿಯನ್ನು ಮುಟ್ಟಿರುತ್ತದೆ. ಹುಟ್ಟುವಳಿಯ

ಬಾಬುಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಿ ವಿಮರ್ಶೆ ಮಾಡುವುದು ನಮ್ಮಲ್ಲಿ ವಾಡಿಕೆಗೆ ಬಂದಿರುತ್ತದೆ.

೧. ದೈವಾನುಗ್ರಹದಿಂದ ಪ್ರಾಪ್ತವಾಗಿರುವ ಸಂಪತ್ತು—

ಚಿನ್ನದ ಮೇಲಿನ ರಾಜಾದಾಯವು ಇವುಗಳಲ್ಲಿ ಮುಖ್ಯವಾದದ್ದು. ಕಾಡುಖಾತೆಯಿಂದ ಬರುವ ವರಮಾನವನ್ನು ಇದೇ ರೀತಿ ಪರಿಗಣಿಸುವುದು ಉತ್ತಮ. ಕ್ರೋಂ ಗಣಿಗಳಿಂದಲೂ ಗಂಧದ ಮರಗಳಿಂದಲೂ ಬರುವ ಆದಾಯವನ್ನು ಈ ಗುಂಪಿಗೆ ಸೇರಿಸಿದರೆ ಒಟ್ಟು ಈ ಬಾಬಿನ ಹುಟ್ಟುವಳಿ ಸುಮಾರು ೫೦-೫೨ ಲಕ್ಷ ರೂಪಾಯಿಗಳಾಗುತ್ತದೆ.

೨. ವಾಣಿಜ್ಯೋದ್ಯಮಗಳ ಆದಾಯ—

ಇವುಗಳನ್ನು ಮೂರು ಪಂಗಡಗಳಾಗಿ ವಿಂಗಡಿಸಬಹುದು.

(೧) ಸರ್ಕಾರವೇ ಮೂಲಧನ ಹಾಕಿ ವ್ಯವಸ್ಥೆಯ ಜವಾಬ್ದಾರಿಯನ್ನು ಹೊತ್ತಿರುವ ಕೈಗಾರಿಕೆಯ ಉದ್ಯಮಗಳಿಂದ ಬರತಕ್ಕ ಆದಾಯ ಒಂದು ಪಂಗಡವಾಗುತ್ತದೆ. ರೈಲ್ವೆಗಳು, ವಿದ್ಯುಚ್ಛಕ್ತಿಯ ಉತ್ಪತ್ತಿ ಕಾರ್ಯಗಳು, ನೀರಾವರಿ ಕೆಲಸ, ಭದ್ರಾವತಿಯ ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ, ಸಾಬೂನು ಕಾರ್ಖಾನೆ, ಸಿಮೆಂಟು ಕಾರ್ಖಾನೆ ಮೊದಲಾದುವುಗಳ ಆದಾಯ ಈ ಪಂಗಡಕ್ಕೆ ಸೇರುವುದು.

(೨) ಕಾರ್ಖಾನೆ ಕಂಪೆನಿಗಳ ಷೇರುಗಳನ್ನು ಕೊಳ್ಳುವುದರಿಂದಲೂ, ಅವಕ್ಕೆ ತೋರಿಸುವ ಇತರ ರಿಯಾಯಿತಿಗಳಿಂದಲೂ ಸರ್ಕಾರಕ್ಕೆ ಬರುವ ಆದಾಯ. ಸಕ್ಕರೆ ಕಾರ್ಖಾನೆ, ಕಾಗದದ ಕಾರ್ಖಾನೆ, ಹೊಗೆಸೊಪ್ಪಿನ ಕಾರ್ಖಾನೆ, ಎಣ್ಣೆಗಳನ್ನೂ ಕೃತಕ

ತುಪ್ಪವನ್ನೂ ತಯಾರಿಸುವ ಕಾರ್ಖಾನೆ, ಗಂಧಕ ದ್ರಾವಕ ಮತ್ತು ಅಮೋನಿಯಂ ಸಲ್ಫೇಟುಗಳನ್ನು ತಯಾರುಮಾಡುವ ಕಾರ್ಖಾನೆ—ಇವುಗಳಲ್ಲಿ ಸರ್ಕಾರವು ಕೊಂಡಿರುವ ಷೇರುಗಳ ಲಾಭ ಈ ಗುಂಪಿಗೆ ಸೇರುವುದು.

(೩) ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಬೇಕೆಂಬ ಉದ್ದೇಶದಿಂದ ಸರ್ಕಾರವು ಖಾಸಗಿ ಜನರಿಗೂ ಕಂಪೆನಿಗಳಿಗೂ ಬ್ಯಾಂಕಿನಂತೆ ಸಾಲಕೊಟ್ಟು ಸಂಪಾದಿಸುವ ಬಡ್ಡಿಯ ರೂಪವಾದ ಆದಾಯ.

ಈ ಬಾಬುಗಳ ಹುಟ್ಟುವಳಿ ಈಚೀಚೆಗೆ ಅಧಿಕವಾಗುತ್ತಿದೆ. ಇದರಿಂದ ಸರ್ಕಾರವು ಲಾಭದಾಯಕವಾದ ಅನೇಕ ಉದ್ಯಮಗಳನ್ನು ಕೈಕೊಳ್ಳಲು ಸಾಧ್ಯವಾಗಿದೆ; ಜನರ ಸಂಪಾದನೆಯ ಶಕ್ತಿ ಹೆಚ್ಚಾಗಿ ಅವರ ಬದುಕು ಉತ್ತಮಗೊಳ್ಳಲು ಅವಕಾಶವುಂಟಾಗಿದೆ.

೩. ತೆರಿಗೆಯಿಂದ ಬರುವ ಆದಾಯ—

ತೆರಿಗೆಯ ಹುಟ್ಟುವಳಿ ಸುಮಾರು ೨೩೦ ಲಕ್ಷ ರೂಪಾಯಿಗಳು. ಇದನ್ನು ಈ ಕೆಳಗಿನ ಬಾಬುಗಳಿಂದ ಸಂಗ್ರಹಿಸಲಾಗುತ್ತಿದೆ.[1]

(i) ಜಮೀನು ಕಂದಾಯ.

(ii) ಆಬ್ಕಾರಿ—(೧) ಸೇಂದಿ, (೨) ಇತರ.

(iii) ವರಮಾನದ ತೆರಿಗೆ.

---

[1] ಕಾಡುಖಾತೆಯಿಂದ ಬರುವ ಹುಟ್ಟುವಳಿಯನ್ನೆಲ್ಲಾ ಮೊದಲನೆಯ ಗುಂಪಿಗೆ ಎಂದರೆ ದೈವಾನುಗ್ರಹದಿಂದ ಪ್ರಾಪ್ತವಾದ ಆದಾಯದ ಗುಂಪಿಗೆ ಸೇರಿಸಿರುವುದರಿಂದ ಅದನ್ನು ತೆರಿಗೆ ಹುಟ್ಟುವಳಿಯಲ್ಲಿ ಬಿಟ್ಟಿದೆ. ಚಿಲ್ಲರೆ ತೆರಿಗೆಗಳಲ್ಲಿ ಸಾಮಾನ್ಯವಾಗಿ ಸೇರಿಸುವ ಸಕ್ಕರೆ ಮತ್ತು ಬೆಂಕಿಕಡ್ಡಿ ತೆರಿಗೆಗಳನ್ನು ಆಬ್ಕಾರಿ ತೆರಿಗೆಗಳೆಂದು ಭಾವಿಸಿದೆ.

(iv) ಸ್ಟಾಂಪು, ಕೋರ್ಟುಫೀ, ರಿಜಿಸ್ಟ್ರೇಷನ್ ಇತ್ಯಾದಿ.

(v) ಚಿಲ್ಲರೆ ತೆರಿಗೆಗಳು—ಜೂಜಿನ ತೆರಿಗೆ, ವಿನೋದದ ತೆರಿಗೆ ಇತ್ಯಾದಿ.

ಮೈಸೂರು ಸರ್ಕಾರದ ಒಟ್ಟು ಹುಟ್ಟುವಳಿ ಮತ್ತು ತೆರಿಗೆಯ ಆದಾಯಗಳಿಗೆ ಸಂಬಂಧಪಟ್ಟ ಕೆಲವು ಮುಖ್ಯವಾದ ಅಂಕಿಗಳನ್ನು ಇಲ್ಲಿ ಕೊಡಬಹುದು. ಫೀ ವರಮಾನವನ್ನು ತೆರಿಗೆಯೆಂದು ಪರಿಗಣಿಸಿ ಒಟ್ಟು ತೆರಿಗೆವರಮಾನವನ್ನು ಲೆಕ್ಕ ಮಾಡಿರುತ್ತದೆ. ಸ್ಥಳೀಯ ಸಂಸ್ಥೆಗಳ ವರಮಾನವನ್ನು ಇಲ್ಲಿ ಗಣಿಸಿರುವುದಿಲ್ಲ.

೧. ಒಟ್ಟು ಹುಟ್ಟುವಳಿ

ವರ್ಷ	ಒಟ್ಟು ಹುಟ್ಟುವಳಿ ಲಕ್ಷ ರೂ.	ಜಮಾನು ಕಂದಾಯ ಲಕ್ಷ ರೂ.	ಒಟ್ಟು ತೆರಿಗೆ ಹುಟ್ಟುವಳಿ ಲಕ್ಷ ರೂ.	ಒಟ್ಟು ಹುಟ್ಟುವಳಿಯಲ್ಲಿ ತೆರಿಗೆ ಹುಟ್ಟುವಳಿಯ ಶೇಕಡಾ ದರ
೧೯೦೧	೧೯೨	೯೮	೧೪೮	೬೬%
೧೯೧೧	೨೪೭	೧೦೭	೧೬೨	೬೬%
೧೯೨೧	೩೧೩	೧೦೮	೨೧೨	೫೧%
೧೯೩೧	೩೩೨	೧೧೧	೨೧೨	೫೨%
೧೯೩೭	೪೦೦	೧೩೦	೨೩೪	೫೮%
೧೯೩೯ ಬಡ್ಜೆಟ್ ಅಂದಾಜು	೩೮೭	೧೨೩	೨೩೫	೬೦%

೧. ತೆರಿಗೆ ಹುಟ್ಟುವಳಿ ಬಾಬುಗಳು

ವರ್ಷ	ಜವಿಾನು ಕಂದಾಯ ಲಕ್ಷ ರೂ.	ಆಬ್ಕಾರಿ, ಸೇಂದಿ ಲಕ್ಷ ರೂ.	ವರಮಾನದ ತೆರಿಗೆ ಲಕ್ಷ ರೂ.	ಸ್ಟಾಂಪು ಗಿಜಿಸ್ಟ್ರೇಷನ್ ಕೋರ್ಟು ಫೀ ಲಕ್ಷ ರೂ.	ಇತರ ಆಬ್ಕಾರಿ ಮತ್ತು ಚಿಲ್ಲರೆ ತೆರಿಗೆಗಳು ಲಕ್ಷ ರೂ.
೧೯೩೦	೧೨೬	೬೯	೧೨	೨೪	....
೧೯೩೧	೧೧೧	೬೭	೧೨	೨೨	....
೧೯೩೨	೧[illegible]೯	೫೫	೧೩	೨೨	....
೧೯೩೩	೧೨೬	೫೪	೧೩	೨೩	....
೧೯೩೪	೧೧೮	೫೩	೨೦	೨೧	....
೧೯೩೫	೧೧೧	೫೧	೨೪	೨೨	೪[illegible]
೧೯೩೬	೧೨೮	೪೯	೨೩	೨೨	೧೦
೧೯೩೭	೧೩೦	೪೮	೨೨	೨೨	೧೦
೧೯೩೮ ತಿದ್ದುಪಡಿ	೧೨೦	೪೮	೨೯	೨೨	೧೬
೧೯೩೯ ಬಡ್ಜೆಟ್ ಅಂದಾಜು....	೧೨೩	೪೮	೨೭	೨೨	೧೫

ಮೇಲೆ ಕೊಟ್ಟಿರುವ ಪಟ್ಟಿಯನ್ನು ಪರೀಕ್ಷಿಸಿ ಅದರಿಂದ ತಿಳಿದುಬರುವ ಅಂಶಗಳನ್ನು ಒಂದೊಂದಾಗಿ ತೆಗೆದುಕೊಳ್ಳೋಣ.

೧. ೧೯೦೧ರಲ್ಲಿ ೧೯೨ ಲಕ್ಷ ರೂಪಾಯಿಗಳ ಒಟ್ಟು ಹುಟ್ಟುವಳಿ ಇದ್ದು ಈಗ ೩೮೭ ಲಕ್ಷಕ್ಕೆ ಏರಿದೆ. ಎಂದರೆ ಸರ್ಕಾರದ ವರಮಾನ ಸಲವತ್ತು ವರುಷಗಳಲ್ಲಿ ಇಮ್ಮಡಿ ಯಾಗಿದೆ. ಇದು ಹೇಗಾಯಿತು ?

೨. ತೆರಿಗೆ ಹುಟ್ಟುವಳಿ ೧೪೮ ಲಕ್ಷದಿಂದ ೨೩೫ ಲಕ್ಷಕ್ಕೆ ಏರಿದೆ. ಎಂದರೆ ೧೯೦೧ರಲ್ಲಿ ಒಟ್ಟು ಹುಟ್ಟುವಳಿಯಲ್ಲಿ ಶೇ. ೭೭ ರಷ್ಟಿದ್ದ ಈ ಹುಟ್ಟುವಳಿ ಈಗ ಶೇ. ೬೦ಕ್ಕೆ ಇಳಿದಿದೆ. ಹೀಗಿದ್ದರೂ ಒಟ್ಟು ಹುಟ್ಟುವಳಿ ಅಧಿಕವಾಗಿರುತ್ತದೆ. ಇದಕ್ಕೆ ಕಾರಣವೇನು? ತೆರಿಗೆಯ ಬಾಬಿನಿಂದಲ್ಲದೆ ಇತರ ವಿಧವಾಗಿ ಎಂದರೆ ಗಣಿ, ಕಾಡು, ವಾಣಿಜ್ಯ, ಕೈಗಾರಿಕೆ ಮುಂತಾದುವುಗಳಿಂದ ಬರುವ ವರಮಾನ ಹೆಚ್ಚಿರುವುದು ಮುಖ್ಯ ಕಾರಣ. ಈ ವರಮಾನ ೧೯೦೧ರಲ್ಲಿ ೪೪ ಲಕ್ಷ ರೂಪಾಯಿಗಳಿದ್ದು ಈಗ ೧೫೨ ಲಕ್ಷಕ್ಕೆ ಏರಿರುತ್ತದೆ.

೩. ಭೂಕಂದಾಯ ೧೯೦೧ರಲ್ಲಿ ೯೮ ಲಕ್ಷ ಇದ್ದದ್ದು ಈಗ ೧೨೩ ಲಕ್ಷವಾಗಿದೆ. ಕಳೆದ ೪೦ ವರ್ಷಗಳಲ್ಲಿ ಸಾಗುವಳಿಗೆ ಬಂದಿರುವ ಜಮೀನಿನ ವಿಸ್ತೀರ್ಣ ಹೆಚ್ಚಿರುವುದೂ[1] ನೀರಾವರಿ ಕೆಲಸಗಳಿಂದ ತರಿ ಬಾಗಾಯಿತು ವ್ಯವಸಾಯ ಹೆಚ್ಚಿರುವುದೂ ಈ ವರಮಾನ ಹೆಚ್ಚಲು ಮುಖ್ಯಕಾರಣ. ಕಂದಾಯದ ದರದಲ್ಲಿ ಆಗುವ ವ್ಯತ್ಯಾಸಗಳೂ ಕಾರಣವಾಗಬಹುದು.[2] ಒಟ್ಟಿನಲ್ಲಿ

---

[1] ಸಾಗುವಳಿಯಲ್ಲಿರುವ ಜಮೀನು ವಿಸ್ತೀರ್ಣ ೧೯೦೫ರಲ್ಲಿ ೭೨ ಲಕ್ಷ ಎಕರೆಯಿದ್ದು ೧೯೩೫ರಲ್ಲಿ ೭೯ ಲಕ್ಷ ಎಕರೆಗೆ ಏರಿರುತ್ತದೆ.

[2] ೧೯೧೨-೧೩ರಲ್ಲಿ ಎಕರೆಗೆ ಸರಾಸರಿ ಕಂದಾಯ ರೂ. ೧-೪-೩ ; ೧೯೩೪-೩೫ರಲ್ಲಿ ರೂ. ೧-೪-೪.

ಜಮೀನು ಕಂದಾಯದ ಆದಾಯಕ್ಕೆ ಸರ್ಕಾರದ ಒಟ್ಟು ಹುಟ್ಟುವಳಿಯಲ್ಲಿ ಹಿಂದೆ ಇದ್ದಷ್ಟು ಪ್ರಾಮುಖ್ಯ ಈಗ ಇರುವಂತೆ ಕಾಣುವುದಿಲ್ಲ. ೧೯೦೧ರ ಒಟ್ಟು ಹುಟ್ಟುವಳಿಯಲ್ಲಿ ಜಮೀನು ಕಂದಾಯವು ಶೇ. ೫೧ರಷ್ಟಿದ್ದು ಈಗ ಶೇ. ೩೨ಕ್ಕೆ ಇಳಿದಿರುತ್ತದೆ; ಅರ್ಧದಿಂದ ಮೂರನೆಯ ಒಂದು ಭಾಗಕ್ಕೆ ಇಳಿದಿದೆ.

೪. ಜಮೀನು ಕಂದಾಯದಲ್ಲಿ ಬರುವ ಆದಾಯ ಅಷ್ಟು ಏರಿಳಿತಗಳಿಗೆ ಒಳಗಾಗಿಲ್ಲವೆಂದೂ ಸೇಂದಿ ಆಬ್ಕಾರಿಯ ವರಮಾನ ಕ್ರಮೇಣ ಇಳಿದು ಮೂರರಲ್ಲಿ ಒಂದು ಭಾಗದಷ್ಟು ಕಡಮೆಯಾಗಿರುವುದೆಂದೂ (ಇದು ಶುಭಸೂಚನೆ) ಸ್ಟಾಂಪು ಮುಂತಾದುವುಗಳ ಆದಾಯವು ಹೆಚ್ಚು ಬದಲಾಯಿಸುತ್ತಿಲ್ಲವೆಂದೂ ಗೊತ್ತಾಗುತ್ತದೆ. ಪಾನನಿರೋಧ ಪ್ರಯತ್ನವು ಮುಂದುವರಿದ ಹಾಗೆಲ್ಲಾ ಸೇಂದಿ ಆಬ್ಕಾರಿಯಿಂದ ಬರುವ ಆದಾಯವು ಬಹಳ ಮಟ್ಟಿಗೆ ಕಡಮೆಯಾಗುವುದು. ವರಮಾನದ ತೆರಿಗೆಯಿಂದಲೂ ಇತರ ಆಬ್ಕಾರಿ ಮತ್ತು ಚಿಲ್ಲರೆ ತೆರಿಗೆಗಳಿಂದಲೂ ಆದಾಯವು ಹೆಚ್ಚುತ್ತಿದೆ. ಸಂಸ್ಥಾನದ ಒಟ್ಟು ಹುಟ್ಟುವಳಿ ಅಧಿಕವಾಗುತ್ತ ಬಂದಿರುವುದು ಮುಖ್ಯವಾಗಿ ಜಮೀನು ಕಂದಾಯ ಹೊರತಾಗಿ ಇರುವ ಇತರ ಬಗೆಯ ಆದಾಯಗಳಿಂದ ಎಂಬ ವಿಷಯ ಸ್ಪಷ್ಟವಾಗುತ್ತದೆ. ಆದರೆ ಇದರಿಂದ ಈಗಿರುವ ಭೂಕಂದಾಯದ ಸಿಸ್ತಿನಲ್ಲಿ ದೋಷವಿಲ್ಲವೆಂದು ಹೇಳಲಾಗುವುದಿಲ್ಲ.

(೨) ತೆರಿಗೆ ಸಿಸ್ತು

ನಮ್ಮ ಸರ್ಕಾರದ ಆದಾಯದ ಸುಮಾರು ಮೂರನೆಯ ಒಂದು ಭಾಗವು ಭೂಕಂದಾಯದಿಂದ ಬರುತ್ತದೆ; ಇದಕ್ಕೆ ಮೊದಲನೆಯ ಸ್ಥಾನವನ್ನು ಕೊಡಬಹುದು. ಎರಡನೆಯದು ಆಬ್ಕಾರಿಬಾಬು; ಮೂರನೆಯದು ವರಮಾನದ ತೆರಿಗೆ.

೧. ಭೂಕಂದಾಯ—

ಮೈಸೂರು ದೇಶದ ಭೂಕಂದಾಯದ ಸಿಸ್ತು ಬಹುಮಟ್ಟಿಗೆ ಬೊಂಬಾಯಿನಲ್ಲಿರುವ ಪದ್ಧತಿಯನ್ನು ಅನುಸರಿಸಿದೆ. ಮೂವತ್ತು ವರ್ಷಕ್ಕೊಂದು ಸಲ ಭೂಮಿಯನ್ನು ಅಳೆಸಿ ಭೂಗುಣ, ಫಸಲು ಮತ್ತು ಅದರ ವರಮಾನ—ಇವುಗಳನ್ನು ಗಮನಿಸಿ ಕಂದಾಯ ವನ್ನು ನಿರ್ಣಯಿಸುತ್ತಾರೆ. ಭೂಕಂದಾಯವು ಇಷ್ಟೇ ಎಂದು ನಿಶ್ಚಿತವಾದ ತೆರಿಗೆ. ಹೀಗೆ ಗೊತ್ತಾದ ದರಕ್ಕಿಂತ ಮುಂದೆ ಮೂವತ್ತು ವರ್ಷವಾದನಂತರ ಗೊತ್ತುಮಾಡುವ ದರವು ಹೆಚ್ಚಾಗಿಯೂ ಕಡಮೆಯಾಗಿಯೂ ಇರಬಹುದು. ಆದರೆ ಒಂದು ನಿರ್ದಿಷ್ಟವಾದ ಪ್ರಮಾಣವನ್ನು ಮೀರಿರಕೂಡದೆಂಬ ನಿಯಮ ವುಂಟು. ಕಂದಾಯವನ್ನು ನಾಲ್ಕು ಕಿಸ್ತುಗಳಲ್ಲಿ ವಸೂಲು ಮಾಡುತ್ತಾರೆ. ಮೊದಲನೆಯ ಕಂತನ್ನು ದವಸ ಬಂದ ಸ್ವಲ್ಪ ಕಾಲ ವಾದ ಮೇಲೆ ಕೊಡಬೇಕಾಗಿದೆ. ಚೆನ್ನಾಗಿ ಬೆಳೆ ಆಗದ ವರ್ಷಗಳಲ್ಲಿ ಸರ್ಕಾರವು ಕಂದಾಯವನ್ನು ಇಳಿಸುವುದಕ್ಕೆ ಅಥವಾ ವಜಾ ಮಾಡುವುದಕ್ಕೆ ಅವಕಾಶವಿರುತ್ತದೆ. ಭೂಕಂದಾಯದಲ್ಲಿ ಸರ್ಕಾ ರವು ಒದಗಿಸುವ ನೀರಿನ ತೆರಿಗೆಯೂ ಸೇರಿರುತ್ತದೆ. ಸರ್ಕಾರವು ತನ್ನ ಹಿಡುವಳಿಯಲ್ಲಿರುವ ಜಮೀನುಗಳನ್ನು ಮಾರುವುದರಿಂದ ಬರುವ ಹಣವೂ ಪರಾಧೀನವಾದ ಜಮೀನುಗಳಿಂದ ಬರುವ ಗುತ್ತಿಗೆಯ ಹಣವೂ ಭೂಕಂದಾಯದ ಲೆಕ್ಕಕ್ಕೇ ಸೇರುತ್ತವೆ.

೨. ಆಬ್ಕಾರಿ—

ಆಬ್ಕಾರಿ ಸಿಸ್ತಿನಲ್ಲಿ ಎರಡು ವಿಧಗಳುಂಟು. ಮಾದಕ ದ್ರವ್ಯ ಗಳಿಗೆ ಸಂಬಂಧಪಟ್ಟ ಸಿಸ್ತು ಮೊದಲನೆಯದು; ನಮ್ಮಲ್ಲಿ ತಯಾರಾಗುವ ಇತರ ಪದಾರ್ಥಗಳು ಎಂದರೆ ಸಕ್ಕರೆ, ಬೆಂಕಿಕಡ್ಡಿ ಇವುಗಳಿಗೆ ಸಂಬಂಧಿಸಿದ್ದು ಎರಡನೆಯದು. ಎರಡನೆಯ ಗುಂಪಿಗೆ

ಸೇರಿದ ತೆರಿಗೆಗಳು ಸುಂಕದ ರೂಪದಲ್ಲಿರುತ್ತದೆ. ಇವುಗಳನ್ನು ಚಿಲ್ಲರೆ ತೆರಿಗೆಗಳಿಂದ ಬರುವ ಆದಾಯದ ಜಾಬಿಗೆ ಸೇರಿಸುವುದು ವಾಡಿಕೆಯಾಗಿದೆ.

(ಅ) ಮಾದಕದ್ರವ್ಯಗಳು :

(೧) ನಮ್ಮ ಸಂಸ್ಥಾನದಲ್ಲಿ ಉತ್ಪತ್ತಿಯಾಗುವ ಹೆಂಡ, ಸಾರಾಯಿ ಮುಂತಾದ ಪದಾರ್ಥಗಳಿಗೆ ಒಂದು ಬಗೆಯಾದ ಕಟ್ಟಳೆ ಇದೆ. ಹೆಂಡ ಇಳಿಸುವುದಕ್ಕೂ, ಸಾರಾಯಿ ತಯಾರು ಮಾಡುವುದಕ್ಕೂ, ಇವುಗಳನ್ನು ಮಾರುವುದಕ್ಕೂ ಸ್ವತಃಸಿದ್ಧವಾದ ಹಕ್ಕು ಯಾರಿಗೂ ಇಲ್ಲ. ಸರ್ಕಾರದಿಂದ ಈ ಹಕ್ಕನ್ನು ಕೊಂಡುಕೊಳ್ಳಬೇಕು. ಹೆಂಡವನ್ನು ಇಳಿಸಲು ಮರಕ್ಕಿಷ್ಟೆಂದು ಗೊತ್ತುಮಾಡುವ ರೀತಿ ಮರದ ತೆರಿಗೆಯನ್ನು ಸರ್ಕಾರಕ್ಕೆ ಸಲ್ಲಿಸಬೇಕು. ಕಾನೂನು ಮೇರೆಗೆ ವರ್ಷಕ್ಕೊಂದು ಸಲ ಮಾಡುವ ಸೇಂದಿ ಹರಾಜಿನಲ್ಲಿ ಹೆಂಡ, ಸಾರಾಯಿ ಮೊದಲಾದ ನಾಡು ದ್ರಾವಕಗಳನ್ನು ಮಾರುವ ಹಕ್ಕನ್ನು ಸರ್ಕಾರಕ್ಕೆ ಹಣ ಸಲ್ಲಿಸಿ ಕೊಳ್ಳಬಹುದು.

(೨) ವಿದೇಶಿ ಮಾದಕದ್ರವ್ಯಗಳನ್ನು ಮಾರಲು ಸರ್ಕಾರದಿಂದ ಲೈಸೆನ್ಸ್ ಪಡೆಯಬೇಕು. ಲೈಸೆನ್ಸ್ ಫೀ ಜೊತೆಗೆ ರಿಜಿಸ್ಟ್ರೇಷನ್ ಮತ್ತು ಸರ್ ಛಾರ್ಜುಗಳನ್ನು ಸರ್ಕಾರದ ಆಬ್ಕಾರಿ ಇಲಾಖೆಗೆ ಸಲ್ಲಿಸಬೇಕು. ಮೈಸೂರು ಸರ್ಕಾರಕ್ಕೆ ಈ ಪದಾರ್ಥಗಳ ಮೇಲೆ ಯಾವ ವಿಧವಾದ ಹೊರಸುಂಕವನ್ನೂ ವಿಧಿಸಲು ಅಧಿಕಾರವಿಲ್ಲ. ಅದು ಇಂಡಿಯ ಸರ್ಕಾರಕ್ಕೆ ಮಾತ್ರ ಸೇರಿದ್ದು.

(೩) ಗಾಂಜಾ, ಅಫೀಮು ಮುಂತಾದುವುಗಳ ಮಾರಾಟವನ್ನೂ ಬೆಳೆಯುವ ಹಕ್ಕೂ ಸರ್ಕಾರದ ಹತೋಟಿಗೆ ಒಳಪಟ್ಟಿರು

ತ್ತದೆ. ಗಾಂಜಾವನ್ನು ಬೆಳೆದ ರೈತರಿಂದ ಸರ್ಕಾರವು ಕೊಂಡು, ಅದರ ಚಿಲ್ಲರೆ ಬಿಕರಿಗೆ ಲೈಸೆನ್ಸ್ ಮೂಲಕ ಏರ್ಪಾಡು ಮಾಡು ತ್ತದೆ. ಅಫೀಮು ವಿಷಯದಲ್ಲಿ ಮೈಸೂರು ಸರ್ಕಾರಕ್ಕೆ ಅದನ್ನು ಬೆಳೆಯುವ ಹಕ್ಕು ಇರುವುದಿಲ್ಲ; ಅದು ಇಂಡಿಯ ಸರ್ಕಾರದ ವಶದಲ್ಲಿದೆ. ಅದು ಬೆಳೆದ ಅಫೀಮನ್ನು ಮೈಸೂರು ಸರ್ಕಾರವು ಕೊಂಡು, ಚಿಲ್ಲರೆ ಬಿಕರಿಗೆ ಒದಗಿಸುತ್ತದೆ. ಇತರ ಮಾದಕ ದ್ರವ್ಯಗಳಂತೆಯೇ ಗಾಂಜಾ ಅಫೀಮುಗಳನ್ನು ಮಾರುವ ಹಕ್ಕನ್ನು ಹರಾಜಿನಲ್ಲಿ ಪಡೆಯಬೇಕು.

(೨) ಇತರ ಪದಾರ್ಥಗಳ ಮೇಲಿನ ಆಬ್ಕಾರಿ:

ಇದನ್ನು ಎಕ್ಸೈಜ್ ಸುಂಕವೆಂದು ಕರೆಯುತ್ತಾರೆ. ಸ್ಟಾಂಪಿನ ಮಾದರಿಯಲ್ಲಿ ಬೆಂಕಿಕಡ್ಡಿ ಪೊಟ್ಟಣಗಳಿಗೆ ಅಂಟಿಸಿರುವ ಚೀಟಿ ಗಳನ್ನು ನೀವು ನೋಡಿರಬಹುದು. ಇವನ್ನು ಇಂಡಿಯ ಸರ್ಕಾರ ದಿಂದ ಕೊಂಡು ಬೆಂಕಿಕಡ್ಡಿ ಪೊಟ್ಟಣಗಳಿಗೆ ಅಂಟಿಸಿ ಅನಂತರ ಮಾರಬೇಕೆಂಬ ಕಡ್ಡಾಯದ ನಿಯಮವುಂಟು. ಪೊಟ್ಟಣಗಳಲ್ಲಿ ಇರುವ ಬೆಂಕಿಕಡ್ಡಿಗೆ ತಕ್ಕಂತೆ ಈ ಸುಂಕವನ್ನು ವಿಧಿಸುತ್ತಾರೆ. ಬೆಂಕಿಕಡ್ಡಿಯ ಮೇಲೆ ಇಂಡಿಯ ಸರ್ಕಾರವು ೧೯೩೪ ರಲ್ಲಿ ಈ ಸುಂಕವನ್ನು ಹೇರಿತು. ಆ ಕೆಲವು ದಿವಸಗಳಲ್ಲಿ ಇದಕ್ಕೆ ಸಂಬಂಧ ಪಟ್ಟ ಕಾನೂನು ನಮ್ಮ ಸಂಸ್ಥಾನದಲ್ಲಿಯೂ ಜಾರಿಗೆ ಬರಬೇಕಾ ಯಿತು. ಇದರಿಂದ ನಾವು ಉಪಯೋಗಿಸುವ ಬೆಂಕಿಕಡ್ಡಿ ಪೊಟ್ಟಣಗಳ ಮೇಲೆ ಸಂದಾಯವಾಗುವ ಸುಂಕದಲ್ಲಿ ಒಂದು ಭಾಗವನ್ನು ಮೈಸೂರು ಸರ್ಕಾರಕ್ಕೆ ಇಂಡಿಯ ಸರ್ಕಾರವು ಕೊಡಲು ಒಪ್ಪಿತು. ೧೯೩೪ರಲ್ಲಿ ಇಂಡಿಯ ಸರ್ಕಾರವು ಹಾಕಿದ ಸುಂಕಕ್ಕೆ ಅನುಸಾರವಾಗಿ ನಮ್ಮಲ್ಲಿ ತಯಾರಾಗುವ

ಸಕ್ಕರೆಯ ಮೇಲೆ ಮೈಸೂರು ಸರ್ಕಾರವು ಸುಂಕವನ್ನು ಹಾಕಿರುತ್ತದೆ. ಸಕ್ಕರೆಯ ಮೇಲೆ ವಿಧಿಸುವ ಆಬ್ಕಾರಿ ಸುಂಕವೂ ಇಂಡಿಯಾ ಸರ್ಕಾರದ ನಿಯಮಗಳಿಗೆ ಅನುಗುಣವಾಗಿರುತ್ತದೆ. ಹೀಗೆ ಯಾವುದಾದರೊಂದು ಪದಾರ್ಥದ ಮೇಲೆ ನಮ್ಮ ಸರ್ಕಾರವು ಈಗ ಸುಂಕವೇರಿಲ್ಲವೆಂದು ಇಟ್ಟುಕೊಳ್ಳೋಣ. ಇಂಡಿಯ ಸರ್ಕಾರವು ತನ್ನ ಆಡಳಿತದ ಪ್ರದೇಶದಲ್ಲಿ ಉತ್ಪತ್ತಿಯಾಗುವ ಆ ಪದಾರ್ಥಗಳ ಮೇಲೆ ಆಬ್ಕಾರಿ ಸುಂಕಹಾಕಿದರೆ ಆಗ ನಮ್ಮ ಸಂಸ್ಥಾನವೂ ಅದೇ ಸುಂಕವನ್ನು ಹಾಕಬೇಕಾಗುತ್ತದೆ.

(೩) ವರಮಾನದ ತೆರಿಗೆ

ಮೈಸೂರಿನಲ್ಲಿ ವರಮಾನದ ತೆರಿಗೆ ಏರ್ಪಟ್ಟದ್ದು ೧೯೨೦ರಲ್ಲಿ. ನಮ್ಮ ದೇಶದಲ್ಲಿ ಉತ್ಪತ್ತಿಯಾಗುವ ವರಮಾನ ಮತ್ತು ಹೊರಗೆ ಉತ್ಪತ್ತಿಯಾಗಿ ಇಲ್ಲಿಗೆ ಬರುವ ವರಮಾನ—ಇವೆರಡರ ಮೇಲೂ ತೆರಿಗೆ ಹಾಕುತ್ತಾರೆ. ಹಿಂದಿನ ವರ್ಷದ ವರಮಾನವನ್ನು ನಿರ್ಧರಿಸಿ ಆ ವರಮಾನದ ಮೇಲೆ ಈ ತೆರಿಗೆಯನ್ನು ರೂಪಾಯಿಗೆ ಇಷ್ಟು ಕಾಸುಗಳೆಂದು ವಿಧಿಸುವರು. ವರ್ಷಕ್ಕೆ ೨೪೦೦ ರೂಪಾಯಿಗಳ ಸಂಪಾದನೆ ಇದ್ದ ಹೊರತು ಈ ತೆರಿಗೆಯನ್ನು ಖಾಸಗಿ ಜನರು ಕೊಡಬೇಕಾಗಿಲ್ಲ. ಸಂಬಳ ಸಾರಿಗೆ ಬರುವವರಿಂದಲೂ ಕಂಪೆನಿಗಳ ಷೇರುಗಳನ್ನು ಹೊಂದುವವರಿಂದಲೂ, ವರ್ತಕರಿಂದಲೂ, ಜಮೀನು ಹೊರತಾಗಿ ಉಳಿದ ಆಸ್ತಿಯಿಂದ ಆದಾಯ ಪಡೆಯುವವರಿಂದಲೂ ಈ ತೆರಿಗೆಯನ್ನು ವಸೂಲುಮಾಡುವರು.

(೪) ಫೀಜು

ರಿಜಿಸ್ಟ್ರೇಷನ್, ಕೋರ್ಟು, ಸ್ಟಾಂಪು ಎಂದು ತೆರಿಗೆ ಫೀಜನ್ನು ಮೂರು ವಿಧವಾಗಿ ವಿಂಗಡಿಸಬಹುದು. ಆಸ್ತಿಪಾಸ್ತಿ

ಗಳ ವಿಕ್ರಯ, ಭೋಗ್ಯ, ಆಧಾರ, ದಾನ ಈ ಮೊದಲಾದುವುಗಳು ನಡೆದಾಗ ಆ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದು ಆವಶ್ಯಕ; ಏಕೆಂದರೆ ಆ ಆಸ್ತಿಗಳ ಯಜಮಾನರು ಯಾರೆಂಬುದು ಸರ್ಕಾರಕ್ಕೂ ಗೊತ್ತಾಗಬೇಕು, ಪ್ರಜೆಗಳಿಗೂ ತಿಳಿಯಬೇಕು. ಇದಕ್ಕೆ ಸೇರಿದ ಕಾಗದಪತ್ರಗಳನ್ನು ರಿಜಿಸ್ಟರು ಮಾಡಿಸ ಬೇಕೆಂಬ ನಿಯಮವಿದೆ. ಹಾಗೆ ಮಾಡಲು ಫೀಜು ಕೊಡಬೇಕು. ವ್ಯಾಜ್ಯಗಳನ್ನು ಸಿಸ್ತಿಗೆ ಗುರಿಪಡಿಸುವ ಉದ್ದೇಶಕ್ಕಾಗಿಯೂ ಸರಿಯಾದ ವಿಚಾರಣೆ ತೀರ್ಪುಗಳಿಗಾಗಿಯೂ ಕೋರ್ಟಿಗೆ ಫೀಜನ್ನು ಸಲ್ಲಿಸಬೇಕು. ಇದನ್ನು ಸ್ಟಾಂಪು ರೂಪವಾಗಿ ವಸೂಲು ಮಾಡುತ್ತಾರೆ. ಬರವಣಿಗೆಯ ಮೂಲಕ ನಡೆಯುವ ಹಲವು ವ್ಯವಹಾರಗಳನ್ನು ಸ್ಟಾಂಪು ಕಾಗದದ ಮೇಲೆಯೇ ಮಾಡಬೇಕೆಂಬ ನಿಯಮವಿದೆ. ಇದರಂತೆ ಸ್ಟಾಂಪು ಮತ್ತು ಛಾಪಾಕಾಗದ ಪಡೆಯಲು ಹಣ ಪಾವತಿಮಾಡಬೇಕಾಗುತ್ತದೆ. ಇಂಥ ಫೀಜುಗಳನ್ನು ವಿಧಿಸುವಾಗ ಸಾಧಾರಣವಾಗಿ ವ್ಯವಹಾರ ದ್ರವ್ಯದ ಮೊತ್ತವನ್ನು ಸರ್ಕಾರವು ಗಣನೆಗೆ ತೆಗೆದುಕೊಳ್ಳುತ್ತದೆ.

ಅಧ್ಯಾಯ ೪

ರಾಜಕೀಯ ವ್ಯವಸ್ಥೆ ಮತ್ತು ತೆರಿಗೆ

ಸ್ಥಳೀಯ ಸರ್ಕಾರ, ಪ್ರಧಾನ ಅಥವಾ ಕೇಂದ್ರ ಸರ್ಕಾರ, ಸಂಯುಕ್ತ ಸರ್ಕಾರ ಎಂಬುದಾಗಿ ರಾಜಕೀಯ ವ್ಯವಸ್ಥೆ ಮೂರು ರೀತಿಯಾಗಿರುತ್ತದೆ.

(೧) ಸ್ಥಳೀಯ ಸರ್ಕಾರ

ದೇಶದ ಬೇರೆ ಬೇರೆ ಭಾಗಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಿ ಅಲ್ಲಿಯ ಕಾರ್ಯಗಳನ್ನು ನಿರ್ವಹಿಸಲು ಸ್ಥಳೀಯ ಅಧಿಕಾರಿಗಳೂ ಸ್ಥಳೀಯ ಸಂಸ್ಥೆಗಳೂ ಬೇಕಾಗುವವು. ಸ್ಥಳಗಳೆಂದರೆ ಜಿಲ್ಲೆ, ಪಟ್ಟಣ ಅಥವಾ ಗ್ರಾಮಗಳು. ಸ್ಥಳೀಯ ಸಂಸ್ಥೆಗಳ ಅಥವಾ ಸರ್ಕಾರಗಳ ಕರ್ತವ್ಯ ಅನೇಕವಾಗಿದೆ. ಅವು ಪ್ರಧಾನ ಸರ್ಕಾರದ ಕಾನೂನಿನಂತೆ ನಿರ್ಮಿಸಿಟ್ಟ ಕೆಲಸಮಾಡುತ್ತವೆ; ತಮ್ಮ ಆಡಳಿತಕ್ಕೆ ಒಳಪಟ್ಟ ಪ್ರಜೆಗಳ ಕ್ಷೇಮಲಾಭವನ್ನು ನೋಡಿಕೊಳ್ಳುತ್ತವೆ. ನಮ್ಮ ದೇಶದಲ್ಲಿರುವ ಸ್ಥಳೀಯ ಸಂಸ್ಥೆಗಳು ಮೂರು ಬಗೆಯಾಗಿವೆ:

೧. ಗ್ರಾಮಪಂಚಾಯತಿಗಳು.
೨. ಮುನಿಸಿಪಾಲಿಟಿ.
೩. ಜಿಲ್ಲಾಬೋರ್ಡು.

೧. ಗ್ರಾಮಪಂಚಾಯತಿ—

ಹಳ್ಳಿಗಳ ಯುಗವು ಈಚೆಗೆ ಪ್ರಾರಂಭವಾಗಿದೆಯೆಂದರೆ ಅದು ಅತಿಶಯೋಕ್ತಿಯ ಮಾತಾಗದು. ಎಲ್ಲೆಲ್ಲಿಯೂ ಗ್ರಾಮಪಂಚಾಯತಿಗಳಿರಬೇಕೆಂದು ತೀರ್ಮಾನವಾಗಿದೆ. ಅನಿವಾರ್ಯ ಕರ್ತವ್ಯ, ಐಚ್ಛಿಕ ಕರ್ತವ್ಯ, ಪ್ರಧಾನ ಸರ್ಕಾರದವರು ವಿಧಿಸಬಹುದಾದ ಕರ್ತವ್ಯ ಎಂದು ವಿಂಗಡವಾದ ಕೆಲವು ಕೆಲಸಗಳನ್ನು ಈ ಸಂಸ್ಥೆಗಳಿಗೆ ವಹಿಸುವ ವಾಡಿಕೆ ಬಂದಿದೆ. ಗ್ರಾಮಗಳ ಜೀರ್ಣೋದ್ಧಾರ ಕಾರ್ಯವನ್ನು ಈ ಸಂಸ್ಥೆಗಳ ಮೂಲಕ ನಡೆಸಬೇಕೆಂದು ಅನೇಕರು ಹೇಳುತ್ತಾರೆ. ಪ್ರಧಾನ ಸರ್ಕಾರದವರೂ ಜಿಲ್ಲಾಬೋರ್ಡಿನವರೂ ನಿಯತವಾದ ಹಣವನ್ನು ಕೊಟ್ಟು

ಕಾರ್ಯನಿರ್ವಾಹಮಾಡಲು ಈ ಸಂಸ್ಥೆಗಳಿಗೆ ಸಹಾಯಮಾಡ ಬಹುದು. ಕೆಲವು ಹುಟ್ಟುವಳಿ ಬಾಬುಗಳನ್ನು ಭಾಗಮಾಡಿ ಒಂದು ಭಾಗವನ್ನು ಪಂಚಾಯತಿಗಳಿಗೇ ಒಪ್ಪಿಸುವುದೊಂದು ಮಾರ್ಗ. ಇವುಗಳಲ್ಲದೆ ನಗರಸಭೆಗಳಿಗಿರುವಂತೆ ಕೆಲವು ತೆರಿಗೆ ಗಳನ್ನು ವಿಧಿಸುವ ಅಧಿಕಾರವನ್ನು ಪಂಚಾಯತಿಗಳಿಗೇ ಕೊಡುವುದಿನ್ನೊಂದು ಮಾರ್ಗ. ಮನೆ, ಅಂಗಡಿ, ವ್ಯಾಪಾರಸ್ಥಳ, ಪಾಳುನಿವೇಶನ—ಇವುಗಳ ಮೇಲೆ ಪಂಚಾಯತಿಗಳು ತೆರಿಗೆ ವಿಧಿಸಬಹುದು. ಹಳ್ಳಿಯಲ್ಲಿರುವ ಜನರಿಂದ ಸಾಮಾನ್ಯವಾದ ಕಾರ್ಯಗಳಿಗೆ ಕೂಲಿಯ ಅಥವಾ ಸೇವೆಯ ರೂಪದಲ್ಲಿ ಒಂದು ವಿಧವಾದ ತೆರಿಗೆಯನ್ನೂ ವಿಧಿಸುವುದುಂಟು.

೨. ಮುನಿಸಿಪಾಲಿಟಿ—

ನಗರವಾಸಿಗಳ ಹಿತಸಾಧನೆಯು ಮುನಿಸಿಪಾಲಿಟಿಗಳ ಮುಖ್ಯ ಕರ್ತವ್ಯ. ಕೆಲವು ತೆರಿಗೆಗಳನ್ನು ಹಾಕುವ ಅಧಿಕಾರ ಅವುಗಳಿಗೆ ಇರುತ್ತದೆ. ಮನೆಗಂದಾಯ, ಕಸಬು ತೆರಿಗೆ, ಬಹುಜನರು ಉಪ ಯೋಗಿಸುವ ಪದಾರ್ಥಗಳ ಮೇಲಿನ ಸುಂಕ (ಆಕ್ಟ್ರಾಯ್), ವಿನೋದ ಮತ್ತು ಮನೋರಂಜಕ ಸಾಮಗ್ರಿಗಳ ಮೇಲಿನ ತೆರಿಗೆ, ಯಾನ ಮತ್ತು ವಾಹನಗಳ ಮೇಲೆ ತೆರಿಗೆ—ಇವು ಮುಖ್ಯ ವಾದುವುಗಳು. ಈ ತೆರಿಗೆಗಳಲ್ಲದೆ ಇತರ ವಿಧದ ಹುಟ್ಟು ವಳಿಯೂ ಉಂಟು. ಕಲ್ಕತ್ತ, ಬೊಂಬಾಯಿ ಮೊದಲಾದ ದೊಡ್ಡ ದೊಡ್ಡ ನಗರಸಭೆಗಳ ಆದಾಯವು ಕೆಲವು ಸಂಸ್ಥಾನಗಳ ಆದಾಯ ಕ್ಕಿಂತಲೂ ಹೆಚ್ಚಾಗಿದೆ. ಆರೋಗ್ಯಪಾಲನೆ, ರಸ್ತೆಗಳ ದುರಸ್ತು, ವಿದ್ಯಾಭ್ಯಾಸ, ವಸತಿ, ಇವೇ ಮೊದಲಾದ ಕಾರ್ಯಗಳು ಮುನಿಸಿಪಾಲಿಟಿಗೆ ಮೀಸಲಾಗಿವೆ. ಆವಶ್ಯಕವಿದ್ದಾಗ ಪ್ರಧಾನ ಸರ್ಕಾರವು ಇವುಗಳಿಗೆ ದ್ರವ್ಯಸಹಾಯ ಮಾಡಬಹುದು.

೩. ಜಿಲ್ಲಾ ಬೋರ್ಡು—

ಆಯಾ ಜಿಲ್ಲೆಗಳಲ್ಲಿರುವ ಪ್ರಜೆಗಳ ಆಯುರಾರೋಗ್ಯ ಸಂಪದಭಿವೃದ್ಧಿಗೆ ಸಹಾಯವಾಗುವ ಕಾರ್ಯಗಳನ್ನು ಜಿಲ್ಲಾ ಬೋರ್ಡಿನವರು ನಡೆಸುವರು. ರಸ್ತೆ ಮಾಡಿಸುವುದು, ಸೇತುವೆ ಕಟ್ಟಿಸುವುದು, ಆಸ್ಪತ್ರೆಗಳ ಸ್ಥಾಪನೆ, ಕುಡಿಯುವ ನೀರನ್ನು ಒದಗಿಸುವುದು, ಪ್ರಾಥಮಿಕ ವಿದ್ಯಾಭ್ಯಾಸ ಪ್ರಚಾರ—ಇವೇ ಮೊದಲಾದ ಕಾರ್ಯಗಳನ್ನು ಜಿಲ್ಲಾಬೋರ್ಡುಗಳು ನಡೆಸ ಬೇಕು. ಆದ್ದರಿಂದ ಅವಕ್ಕೆ ಕೆಲವು ತೆರಿಗೆಗಳನ್ನು ಹಾಕುವ ಅಧಿಕಾರವಿರುತ್ತದೆ. ತೆರಿಗೆಗಳಿಗಿಂತಲೂ ಮುಖ್ಯವಾದುವು ಸೆಸ್ಸುಗಳು. ಇವನ್ನು ಜಿಲ್ಲಾಬೋರ್ಡಿನ ಪರವಾಗಿ ಪ್ರಧಾನ ಸರ್ಕಾರನೇ ಭೂಕಂದಾಯದ ಜೊತೆಯಲ್ಲಿ ವಸೂಲುಮಾಡು ತ್ತದೆ. ನೂರು ರೂಪಾಯಿ ಭೂಕಂದಾಯಕ್ಕೆ ಸ್ಥಳೀಯ ಸೆಸ್ಸು ರೂ. ೬-೪-೦ ; ಇದನ್ನು ಕೇಂದ್ರ ಸರ್ಕಾರವು ಸಂಗ್ರಹಿಸಿ, ಬಂದ ಮೊಬಲಗನ್ನು ಸ್ಥಳೀಯ ಸಂಸ್ಥೆಗಳ ಕಾರ್ಯಗಳಿಗಾಗಿ ಮೀಸಲಾಗಿಡುತ್ತದೆ.

ಈ ಮೂರು ಸಂಸ್ಥೆಗಳೂ ಕೇಂದ್ರ ಸರ್ಕಾರದೊಡನೆ ಸಹಕರಿಸಿ ಕೆಲಸ ನಡೆಸುವುದರಿಂದ ಯಾವ ಬಗೆಯ ಒಳ ಘರ್ಷಣೆಗೂ ಅವಕಾಶವಿರುವುದಿಲ್ಲ.

(೨) ಪ್ರಧಾನ ಅಥವಾ ಕೇಂದ್ರ ಸರ್ಕಾರ

ಸ್ಥಳೀಯ ಸಂಸ್ಥೆಗಳ ಆಡಳಿತವು ಎಲ್ಲ ಪ್ರದೇಶಗಳಲ್ಲಿಯೂ ಏಕರೀತಿಯಾಗಿ ನಡೆಯುವಂತೆ ನೋಡಿಕೊಳ್ಳುವುದು ಪ್ರಧಾನ ಸರ್ಕಾರದ ಕರ್ತವ್ಯಗಳಲ್ಲಿ ಒಂದು. ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಸ್ವಾತಂತ್ರ್ಯವನ್ನು ಕೊಡುವುದೇ ಆಗಲಿ ಬಿಡುವುದೇ

ಆಗಲಿ ಅದರ ವಿಮರ್ಶೆಗೆ ಒಳಪಟ್ಟಿದೆ. ತೆರಿಗೆಗಳ ವಿಷಯದಲ್ಲಿಯೂ ಅದು ತನ್ನ ಅಧಿಕಾರವನ್ನು ಚಲಾಯಿಸಿ ಅವುಗಳಿಂದ ಕೆಲಸ ಮಾಡಿಸಿಕೊಳ್ಳುತ್ತದೆ. ಒಟ್ಟಿನ ಮೇಲೆ ಆಡಳಿತದಲ್ಲಿ ಸಾಮರಸ್ಯ ವನ್ನುಂಟುಮಾಡಿ ದೇಶದ ಎಲ್ಲಾ ಪ್ರಜೆಗಳಿಗೂ ರಕ್ಷಣೆ ಶಾಂತಿ ನೆಮ್ಮದಿಗಳು ದೊರೆಯುವಂತೆ ಮಾಡುವುದು ಇದರ ಕೆಲಸ.

(೩) ಸಂಯುಕ್ತ ಸರ್ಕಾರ

ವಿಶಾಲವಾದ ಭೂಪ್ರದೇಶದಲ್ಲಿ ಅನೇಕ ಪ್ರಧಾನ ಸರ್ಕಾರ ಗಳು ಇರುತ್ತವೆ. ಅವುಗಳ ರಚನೆ ಯಾವಾಗಲೂ ಒಂದೇ ರೀತಿಯಾಗಿರುವುದಿಲ್ಲ. ಆಡಳಿತದಲ್ಲಿ ಏಕರೂಪತೆ ಆವಶ್ಯಕ ವೆಂದು ಕಂಡುಬಂದಾಗ ಇವೆಲ್ಲ ಒಟ್ಟಿಗೆ ಸೇರಿ ಸಂಯುಕ್ತ ಸರ್ಕಾರವನ್ನು ಸ್ಥಾಪಿಸಿಕೊಳ್ಳಬಹುದು. ಸಮಾನವಾದ ಉದ್ದೇ ಶಗಳೂ ಆಶೆ ಆಕಾಂಕ್ಷೆಗಳೂ ಸಂಸ್ಕೃತಿಯೂ ಇರುವಾಗ ಕೂಡ ಸಂಯುಕ್ತ ಸರ್ಕಾರವನ್ನು ಏರ್ಪಡಿಸಬಹುದು. ಇದ ರಿಂದ ಯಾವುದೊಂದು ಪ್ರಧಾನ ಸರ್ಕಾರದ ಸ್ವಾತಂತ್ರ್ಯಕ್ಕೂ ಚ್ಯುತಿ ಬರುವುದಿಲ್ಲ. ಇಂತಹ ಸಂಯುಕ್ತ ರಾಜ್ಯಾಂಗ ವ್ಯವಸ್ಥೆ ೧೯೩೫ ರಲ್ಲಿ ಪ್ರಕಟವಾದ "ಗವರ್ನಮೆಂಟ್ ಆಫ್ ಇಂಡಿಯಾ ಆ್ಯಕ್ಟ್" ಎಂಬ ವಿಧಿಯ ಪ್ರಕಾರ ಇಂಡಿಯಾ ದೇಶದಲ್ಲಿ ಜಾರಿಗೆ ಬರಬೇಕಾಗಿದೆ. ಹೀಗಾದರೆ ಪ್ರಧಾನ ಸರ್ಕಾರಗಳಲ್ಲಿ ಒಂದಾದ ಮೈಸೂರು ಅದಕ್ಕೆ ಸೇರಬೇಕಾಗಬಹುದು. ಇದು ಮೈಸೂರಿನ ಸಮಸ್ಯೆ ಮಾತ್ರವೇ ಅಲ್ಲ. ಇತರ ದೇಶೀಯ ಸಂಸ್ಥಾನಗಳಿಗೂ ಅನ್ವಯಿಸುವ ವಿಷಯ.

ಈಗಿರುವ ಸ್ಥಿತಿಯಲ್ಲಿ ಸಂಸ್ಥಾನಗಳು ಇಂಡಿಯಾ ಸರ್ಕಾರದ ಆಡಳಿತದಲ್ಲಿ ಹೆಚ್ಚಿನ ರಾಜಕೀಯ ಆರ್ಥಿಕ ಅಧಿಕಾರಗಳನ್ನು

ಹೊಂದುವುದು ಸಾಧ್ಯವಾಗಿಲ್ಲ. ಆದರೂ ಇಂಡಿಯಾ ಸರ್ಕಾರವು ವಿಧಿಸಿದ ತೆರಿಗೆಗಳನ್ನು ಮೈಸೂರು ದೇಶದ ಪ್ರಜೆಗಳು ಕೊಡುತ್ತಿರುವರೆಂಬ ವಿಷಯವನ್ನು ನಾವು ತಿಳಿದಿರಬೇಕು. ಹೊರಗಿನ ದೇಶಗಳಿಂದ ಬರುವ ಅನೇಕ ಪದಾರ್ಥಗಳನ್ನು ನಾವು ಉಪಯೋಗಿಸುವೆವಷ್ಟೆ. ಈ ಸಾಮಾನುಗಳ ಮೇಲೆಲ್ಲ ಇಂಡಿಯಾ ಸರ್ಕಾರವು ಸುಂಕವನ್ನು ವಸೂಲುಮಾಡುತ್ತದೆ. ವ್ಯಾಪಾರದಮೇಲಿನಸುಂಕದಿಂದಬರುವಆದಾಯವು ಇಂಡಿಯಾ ಸರ್ಕಾರದ ಮುಖ್ಯ ಹುಟ್ಟುವಳಿ. ನಾವು ಉಪಯೋಗಿಸುವ ಉಪ್ಪಿನ ಮೇಲಿನ ತೆರಿಗೆಯು ಇಂಡಿಯಾ ಸರ್ಕಾರದ ಖಜಾನೆಗೆ ಸಲ್ಲುವ ಆದಾಯ. ನಾವು ಕೊಳ್ಳುವ ಬೈಸಿಕಲ್ಲುಗಳು, ಗಡಿಯಾರಗಳು, ಮೋಟಾರುಗಳು, ಇವೇ ಮೊದಲಾದ ಸಾಮಾನುಗಳ ಮೇಲೆ ಹಾಕಿರುವ ತೆರಿಗೆಗಾಗಿ ಪ್ರತಿ ವರ್ಷವೂ ಲಕ್ಷಾಂತರ ರೂಪಾಯಿಗಳನ್ನು ಮೈಸೂರು ಪ್ರಜೆಗಳಾದ ನಾವು ಬ್ರಿಟಿಷ್ ಇಂಡಿಯಾ ಸರ್ಕಾರಕ್ಕೆ ಸಲ್ಲಿಸುತ್ತಿದ್ದೇವೆ. ಅಲ್ಲದೆ, ಮೈಸೂರು ಪೊಗದಿಯ ರೂಪದಲ್ಲಿ ನೇರವಾದ ತೆರಿಗೆಯನ್ನು ಇಂಡಿಯಾ ಸರ್ಕಾರಕ್ಕೆ ಸಲ್ಲಿಸುತ್ತಿದೆ.[1] ಇದನ್ನುಳಿದು ಬೇರೆ ಬೇರೆ ರೂಪದಲ್ಲಿ ಮೈಸೂರು ಇಂಡಿಯಾ ಸರ್ಕಾರಕ್ಕೆ ಪ್ರತಿವರ್ಷವೂ ಸಲ್ಲಿಸುವ ಮೊತ್ತವು ಒಂದು ಕೋಟಿ ರೂಪಾಯಿಗೆ ಮೀರಿರುತ್ತದೆ. ಎಂದರೆ

---

[1] ೧೭೯೯ರಿಂದ ಇದುವರೆಗೆ ಸುಮಾರು ೩೪ ಕೋಟಿ ರೂಪಾಯಿಗಳಷ್ಟು ದ್ರವ್ಯವನ್ನು ಈ ರೂಪದಲ್ಲಿ ಮೈಸೂರು ತೆತ್ತಿದೆ. ಇಂಡಿಯ ದೇಶದ ಸಂಸ್ಥಾನಗಳ ಹಣಕಾಸಿನ ವಿಚಾರದ ಪರಿಶೀಲನೆಗಾಗಿ ನೇಮಕವಾಗಿದ್ದ "ಇಂಡಿಯನ್ ಸ್ಟೇಟ್ಸ್ ಎನ್‌ಕ್ವೈರಿ ಕಮಿಟಿ (ಫೈನಾನ್ಷಿಯಲ್)" ಎಂಬ ಸಮಿತಿಯವರ ಸಲಹೆಯ ಮೇರೆ ೧೯೩೭–೩೮ನೆಯ ಸಾಲಿನಿಂದ ಪೊಗದಿಯಲ್ಲಿ ೫.೩೯ ಲಕ್ಷ ರೂಪಾಯಿಗಳನ್ನು ಸದ್ಯಕ್ಕೆ ಕಡಮೆಮಾಡಿದೆ.

ತಲೆ ಒಂದಕ್ಕೆ ಸುಮಾರು ಒಂದೂಮುಕ್ಕಾಲು ರೂಪಾಯಿ ಯಷ್ಟು ತೆರಿಗೆಯ ಭಾರವನ್ನು ಮೈಸೂರು ಪ್ರಜೆಗಳು ಹೊತ್ತಿರುತ್ತಾರೆ. ಈ ಹಣವು ನಮ್ಮ ದೇಶದ ಪ್ರಜಾಜೀವನಕ್ಕಾಗಿಯೇ ದೊರೆಯಲು ಸಾಧ್ಯವಾದರೆ ಪ್ರಜೆಗಳ ಕ್ಷೇಮವು ಅಭಿವೃದ್ಧಿಯಾಗಲು ಬಲುಮಟ್ಟಿಗೆ ಅನುಕೂಲವಾಗುವುದು.

ಮೈಸೂರಿಗೆ ದೊರೆಯುವ ಸೌಲಭ್ಯಗಳಿಗೂ ಅದು ಸಲ್ಲಿಸುವ ತೆರಿಗೆಗಳಿಗೂ ಇರುವ ತಾರತಮ್ಯವನ್ನು ಕೆಳಗೆ ಕೊಟ್ಟಿರುವ ಪಟ್ಟಿಯಿಂದ ಸ್ಥೂಲವಾಗಿ ತಿಳಿಯಬಹುದು.[1]

ನಮಗೆ ದೊರೆಯುವ ಸೌಕರ್ಯಗಳ ಅಂದಾಜಾ ಬೆಲೆ	ಲಕ್ಷ ರೂ.	ಮೈಸೂರು ಕೊಡುವ ತೆರಿಗೆಗಳ ಅಂದಾಜಾ ಮೊಬಲಗು	ಲಕ್ಷ ರೂ.
ರಕ್ಷಣೆಯ ಸೌಕರ್ಯಕ್ಕೆ	೧೧೪	ಪೊಗದಿ	೨೪೧/೩
ಇಂಡಿಯಾ ಸರ್ಕಾರವು ಕೈಕೊಳ್ಳುವ ಕಾರ್ಯಗಳ ಫಲವನ್ನು ಅನುಭವಿಸುವುದಕ್ಕೆ	೧೮	ಸೈನ್ಯದ ಖರ್ಚು	೯
		ವಿದೇಶದ ವ್ಯಾಪಾರದ ಮೇಲಿನ ಸುಂಕ	೯೭
		ಉಪ್ಪಿನ ತೆರಿಗೆ	೧೮
		ನಾಣ್ಯದ ಚಲಾವಣೆ ಮತ್ತು ಇತರ ಬಾಬುಗಳು	೧೬
ಒಟ್ಟು	೧೩೨	ಒಟ್ಟು	೧೬೪೧/೩

ಸಂಯುಕ್ತ ಸರ್ಕಾರ ಬಂದಾಗ ಮೈಸೂರು ತೆರುವ ಪೊಗದಿಯು ರೂಪಾಂತರವನ್ನು ತಾಳುತ್ತದೆ. ರಕ್ಷಣೆಯ ಖರ್ಚಿಗಾಗಿ

[1] *Financial Problems of the States in Federal India*, by Prof. V. L. D'Souza, 1935: p. 61.

ಬೇಕಾಗುವ ನಿರ್ದಿಷ್ಟವಾದ ಹಣವನ್ನು ಸಂಯುಕ್ತ ಸರ್ಕಾರವು ಪ್ರಧಾನ ಸರ್ಕಾರಗಳಿಂದ ವಸೂಲು ಮಾಡುತ್ತದೆ. ಮೈಸೂರು ಕೊಡುವ ಪೊಗದಿಯಲ್ಲಿ ೧೭–೧೮ ಲಕ್ಷ ರೂಪಾಯಿಗಳು ಈ ರೀತಿಯಾಗಿ ಸಂದಾಯವಾಗಿ ಸಿಂತ ಭಾಗವು ಮೈಸೂರಿಗೇ ದಕ್ಕುತ್ತದೆ. ಸಂಯುಕ್ತ ಸರ್ಕಾರವು ತನ್ನ ಆದಾಯದ ಬಾಬುಗಳೆಂದು ಗೊತ್ತುಮಾಡಿರುವ ಕೆಲವು ತೆರಿಗೆಗಳನ್ನು ಸಂಸ್ಥಾನಗಳ ಮೇಲೆ ಜಾರಿಮಾಡಬಹುದು. ಇದರಿಂದ ಆಗುವ ಲಾಭ ನಷ್ಟಗಳನ್ನು ಈಗ ಹೇಳಲು ಸಾಧ್ಯವಿಲ್ಲ.

ಅಧ್ಯಾಯ ೫

ಹೊಸ ತೆರಿಗೆಗಳು

ತೆರಿಗೆಗಳನ್ನು ಪ್ರತ್ಯಕ್ಷ ಮತ್ತು ಪರೋಕ್ಷವೆಂದು ವಿಂಗಡಿಸಿರುವ ವಿಷಯವು ತಿಳಿದಿದೆ. ಪಾಶ್ಚಾತ್ಯ ದೇಶಗಳಲ್ಲಿ ಈಗ ಸುಮಾರು ಅರುವತ್ತು ವರ್ಷಗಳಿಂದ ಪ್ರತ್ಯಕ್ಷ ತೆರಿಗೆಗಳು ಹೆಚ್ಚು ಪ್ರಾಶಸ್ತ್ಯವನ್ನು ಪಡೆಯುತ್ತಿವೆ. ಕೇಂದ್ರ ಸರ್ಕಾರದವರು ಈ ವಿಧದ ತೆರಿಗೆಗಳಿಂದಲೇ ಹೆಚ್ಚು ವರಮಾನವನ್ನು ಸಂಪಾದಿಸುವರು. ಪ್ರತ್ಯಕ್ಷ ತೆರಿಗೆಗಳಲ್ಲೆಲ್ಲಾ ಬಹಳ ಮುಖ್ಯವಾದುವು ವರಮಾನದ ತೆರಿಗೆ ಮತ್ತು ಆಸ್ತಿಯ ಮೇಲಿನ ತೆರಿಗೆ. ಇಂಡಿಯಾ ದೇಶದಲ್ಲಿಯೂ ಮೈಸೂರು ದೇಶದಲ್ಲಿಯೂ ವರಮಾನದ ತೆರಿಗೆ ಜಾರಿಯಲ್ಲಿರುತ್ತದೆ.

ಯೂರೋಪಿನ ದೊಡ್ಡ ಯುದ್ಧವಾದೀಚೆಗೆ ಸರ್ಕಾರಗಳ ಕಾರ್ಯಕ್ಷೇತ್ರವು ಬಹು ವಿಸ್ತಾರವಾಗುತ್ತಿದೆ. ಸರ್ಕಾರಗಳು ಹೊಸ ಹೊಸದಾದ ದೊಡ್ಡ ಕಾರ್ಯಗಳನ್ನು ಕೈಕೊಂಡು

ನಿರ್ವಾಹಮಾಡಲು ಹೊಸ ತೆರಿಗೆಗಳನ್ನು ಹಾಕುತ್ತಿವೆ. ಈ ರೀತಿ ಹಾಕಿರುವ ಹೊಸ ತೆರಿಗೆಗಳಲ್ಲಿ ವ್ಯಾಪಾರದ ತೆರಿಗೆಯೂ ಒಂದು. ಈ ತೆರಿಗೆಯು ಯೂರೋಪು (ಇಂಗ್ಲೆಂಡ್ ಹೊರತಾಗಿ) ಮತ್ತು ಅಮೆರಿಕ ಖಂಡಗಳ ಹಲವು ದೇಶಗಳಲ್ಲಿ ಪ್ರಚಾರವಾಗಿ ಹೆಚ್ಚು ಪ್ರಾಮುಖ್ಯವನ್ನು ಪಡೆಯುತ್ತಿದೆ. ಸುಂಕದ ಮತ್ತು ವರಮಾನದ ತೆರಿಗೆಗಳ ಮೂಲಕ ಎಷ್ಟು ಆದಾಯ ಬರುವುದೋ ಅಷ್ಟು ಆದಾಯ ಈ ವ್ಯಾಪಾರ ತೆರಿಗೆಯು ಮೂಲಕ ಸರ್ಕಾರಗಳಿಗೆ ಬರುತ್ತಿದೆ. ಕೆಲವು ದೇಶಗಳಲ್ಲಂತೂ ಈ ತೆರಿಗೆಯ ಆದಾಯವು ಸುಂಕ ವರಮಾನತೆರಿಗೆಗಳಿಂದ ಬರುವ ಆದಾಯವನ್ನು ಮೀರಿಸಿದೆ. ವ್ಯಾಪಾರ ತೆರಿಗೆಯಿಂದ ಎಷ್ಟು ಹೆಚ್ಚಿನ ಹುಟ್ಟುವಳಿಯನ್ನು ಸರ್ಕಾರಗಳು ಪಡೆಯುತ್ತಿವೆಯೆಂಬುದನ್ನು ಮುಂದಿನ ಪುಟದಲ್ಲಿ ಕೊಟ್ಟಿರುವ ಪಟ್ಟಿಯಲ್ಲಿ ಕಾಣಬಹುದು.

ಇಂಡಿಯಾ ದೇಶದಲ್ಲಿ ೧೯೩೭ ರಿಂದ ಈಚೆಗೆ, ಪ್ರಾಂತ ಸ್ವಾತಂತ್ರ್ಯ ದೊರೆತ ಮೇಲೆ, ಪ್ರಾಂತ ಸರ್ಕಾರಗಳ ಕಾರ್ಯಕಲಾಪಗಳು ವಿಶೇಷವಾಗುತ್ತ ಬಂದಿವೆ. ಈ ಕಾರ್ಯಗಳಿಗಾಗಿ ಪ್ರತಿಯೊಂದು ಪ್ರಾಂತವೂ ತನ್ನ ಹುಟ್ಟುವಳಿಯನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಇದಕ್ಕಾಗಿ ಪ್ರಾಂತ ಸರ್ಕಾರಗಳು ಹೊಗೆಸೊಪ್ಪು, ಪೆಟ್ರೋಲು, ವೃತ್ತಿ, ವಿದ್ಯುಚ್ಛಕ್ತಿ ಇವುಗಳ ಮೇಲೆ ತೆರಿಗೆಗಳನ್ನು ವಿಧಿಸುತ್ತಿವೆ. ಹಾಗೆಯೇ ಇಂಡಿಯಾ ಸರ್ಕಾರವೂ ತನ್ನ ಆಯವ್ಯಯವನ್ನು ಸರಿತೂಗಿಸಿಕೊಳ್ಳುವುದಕ್ಕಾಗಿ ಹೊಸ ತೆರಿಗೆಗಳನ್ನು ವಿಧಿಸಲು ಪ್ರಯತ್ನಿಸುತ್ತಿದೆ. ಇವುಗಳಲ್ಲಿ ವ್ಯಾಪಾರ ತೆರಿಗೆಯನ್ನೂ ಆಸ್ತಿ ಹಕ್ಕುದಾರಿಯ ಮೇಲಿನ ತೆರಿಗೆಯನ್ನೂ (Death duties or Inheritance taxes) ಮಾದರಿಗಾಗಿ ಪರಿಶೀಲಿಸಬಹುದು.

ದೇಶ		ವರ್ಷ	ವರಮಾನದ ತೆರಿಗೆ	ಸುಂಕದಿಂದ ಬಂದದ್ದು	ವ್ಯಾಪಾರದ ತೆರಿಗೆಯಿಂದ	ಒಟ್ಟು
ಫ್ರಾನ್ಸ್	....	೧೯೩೪	೧೯·೫%	೧೫·೧%	೧೭·೫%	೫೨·೧%
ಜರ್ಮನಿ	....	೧೯೩೨–೩೩	೯·೪%	೨೨·೩%	೧೯·೧%	೫೦·೮%
ಹಂಗೇರಿ	....	೧೯೩೨–೩೩	೧೦·೬%	೪·೮%	೧೨·೦%	೨೮·೩%
ಚೆಕೊಸ್ಲೊವೇಕಿಯಾ	....	೧೯೩೩	೧೪·೬%	೬·೫%	೨೩·೦%	೪೪·೧%
ಆಸ್ಟ್ರಿಯಾ	....	೧೯೩೪	೧೯·೪%	೧೬·೦%	೨೧·೨%	೫೬·೬%

ವ್ಯಾಪಾರ ತೆರಿಗೆ (Sales Tax)—

ಇದು ಪರೋಕ್ಷವಾದ ತೆರಿಗೆ. ಮದರಾಸು ಸರ್ಕಾರವು ವ್ಯಾಪಾರ ತೆರಿಗೆಯನ್ನು ವಿಧಿಸಬೇಕೆಂದು ಪ್ರಯತ್ನಮಾಡುತ್ತಿರುವ ವಿಷಯವು ಎಲ್ಲರಿಗೂ ತಿಳಿದಿದೆ. ಈಚೆಗೆ ಅಲ್ಲಿನ ಶಾಸನ ಸಭೆಯು ಈ ಮಸೂದೆಗೆ ಒಪ್ಪಿಗೆಯನ್ನೂ ಕೊಟ್ಟಿದೆ. ಈ ತೆರಿಗೆ ಪ್ರಜಾಸಮುದಾಯಕ್ಕೆಲ್ಲಾ ಅನ್ವಯಿಸುವುದರಿಂದ ಇದರ ದರ ಕಡಮೆಯಾಗಿದ್ದರೂ ಹೆಚ್ಚು ಆದಾಯ ಬರುತ್ತದೆ. ವ್ಯಾಪಾರವು ಹೆಚ್ಚಿದಂತೆಲ್ಲಾ ವರಮಾನವೂ ಹೆಚ್ಚುತ್ತದೆ. ಈ ಹೊಸ ತೆರಿಗೆಯಿಂದ ಒಂದೂವರೆ ಕೋಟಿ ರೂಪಾಯಿಗಳಷ್ಟು ಆದಾಯ ಸರ್ಕಾರಕ್ಕೆ ಬರುವುದೆಂದು ನಿರೀಕ್ಷಿಸಲಾಗಿದೆ.[1]

ವ್ಯಾಪಾರ ತೆರಿಗೆಯನ್ನು ಎಲ್ಲ ಪದಾರ್ಥಗಳ ಮೇಲೂ ಎಲ್ಲ ವರ್ತಕರ ಮೇಲೂ ವಿಧಿಸಬಹುದು; ಅಥವಾ ಸಣ್ಣ ವ್ಯಾಪಾರಗಳಿಗೂ ಅತ್ಯಾವಶ್ಯಕವಾದ ಪದಾರ್ಥಗಳಿಗೂ ವೃತ್ತಿಗಳಿಗೂ ಈ ತೆರಿಗೆ ಅನ್ವಯಿಸದಂತೆ ಮಾಡಬಹುದು. ಎಲ್ಲರೂ ಉಪಯೋಗಿಸುವ ಪದಾರ್ಥಗಳ ಮೇಲೆ ಕಡಮೆದರದ ವ್ಯಾಪಾರದ ತೆರಿಗೆಯನ್ನು ವಿಧಿಸುವುದೂ, ಭೋಗಸಾಮಗ್ರಿಗಳ ಮೇಲೂ ಅತಿ ಬೆಲೆಯುಳ್ಳ ಪದಾರ್ಥಗಳ ಮೇಲೂ ಹೆಚ್ಚಿನ ದರದ ತೆರಿಗೆಗಳನ್ನು ವಿಧಿಸುವುದೂ ವಾಡಿಕೆ.

ಜೀವನಕ್ಕೆ ಆವಶ್ಯಕವಾದ ಪದಾರ್ಥಗಳ ಮೇಲೆ ತೆರಿಗೆಗಳನ್ನು ಹೇರಬಾರದೆಂಬ ನಿಯಮಕ್ಕೆ ಇದು ವಿರುದ್ಧವಾದುದೇನೋ

---

[1] ಮದರಾಸಿನ ವ್ಯಾಪಾರದ ತೆರಿಗೆಯ ಕಾನೂನು ಪ್ರಕಾರ ೧೦,೦೦೦ ರೂ. ಗೆ ಕಡಮೆ ವ್ಯಾಪಾರ ಮಾಡುವವರಿಗೆ ತೆರಿಗೆಯಿಲ್ಲ. ಶೇಕಡಾ ೦-೮-೦ ದರದಲ್ಲಿ ತೆರಿಗೆಯನ್ನು ವಿಧಿಸಬೇಕೆಂದು ಯೋಚಿಸಲಾಗಿದೆ.

ಹೌದು. ಆದರೆ ತೆರಿಗೆಯ ದರ ತೀರ ಅಲ್ಪವಾಗಿರುವುದರಿಂದ ಹೆಚ್ಚಿನ ಕೆಡುಕೇನೂ ಆಗಲಾರದು. ಹೆಚ್ಚಿನ ತೊಂದರೆಯಿಲ್ಲದೆ ಅಧಿಕ ವರಮಾನವನ್ನು ತರುವ ವ್ಯಾಪಾರ ತೆರಿಗೆ ಜನಪ್ರಿಯ ವಾಗಬಹುದು.

ಆಸ್ತಿ ಹಕ್ಕುದಾರಿಯ ಮೇಲಿನ ತೆರಿಗೆ—

ಈ ತೆರಿಗೆಯನ್ನು ಇಂಗ್ಲಿಷಿನಲ್ಲಿ ಡೆತ್ ಡ್ಯೂಟೀಸ್ (Death duties) ಎಂದು ಕರೆಯುತ್ತಾರೆ. ಇದನ್ನು ದಾಯಭಾಗದ ತೆರಿಗೆ ಯೆಂದು ಬೇಕಾದರೂ ಕರೆಯಬಹುದು. ಕೇರಳವಾಗಿ ಆಸ್ತಿಪಾಸ್ತಿ ಗಳನ್ನು ಬಿಟ್ಟು ಯಾರಾದರೂ ಮೃತಿಹೊಂದಿದರೆ ಅವನ ಬಂಧು ಗಳು ಆ ಆಸ್ತಿಯಲ್ಲಿ ಕೊಂಚಭಾಗವನ್ನು ಸರ್ಕಾರಕ್ಕೆ ತೆರಿಗೆಯ ರೂಪದಲ್ಲಿ ಸಲ್ಲಿಸಬೇಕು; ಇಲ್ಲದಿದ್ದರೆ ಆ ಆಸ್ತಿ ಅವರಿಗೆ ವಶ ವಾಗುವುದಿಲ್ಲ. ತಂದೆಯೋ ತಾತನೋ ದೂರದ ದಾಯಾದಿಯೋ ಬಿಟ್ಟುಹೋದ ಆಸ್ತಿಯನ್ನು ಅನಾಯಾಸವಾಗಿ ಪಡೆದು ಒಂದು ಕಡೆ ಕುಳಿತು ತಿನ್ನುವವನು ಜನಸಾಮಾನ್ಯದ ಪ್ರಯೋಜನಕ್ಕಾಗಿ ಆ ಆಸ್ತಿಯ ಒಂದು ಭಾಗವನ್ನು ಸಲ್ಲಿಸಬೇಕೆಂಬುದೇ ಈ ತೆರಿಗೆಯ ತತ್ವ. ಈ ಪದ್ಧತಿಯು ಯೂರೋಪು ಮತ್ತು ಅಮೆರಿಕಾ ಖಂಡ ಗಳಲ್ಲಿ ಜಾರಿಯಲ್ಲಿರುತ್ತದೆ. ೧೯೩೫—೩೬ ರಲ್ಲಿ ಈ ತೆರಿಗೆಯಿಂದ ಇಂಗ್ಲೆಂಡ್ ದೇಶದ ಖಜಾನೆಗೆ ಸುಮಾರು ೮೮೦ ಲಕ್ಷ ಪೌಂಡುಗಳ ವರಮಾನವು ಬಂದಿತು. ಇಂಗ್ಲೆಂಡ್ ಸರ್ಕಾರದ ಹುಟ್ಟುವಳಿಯಲ್ಲಿ ಹತ್ತರಲ್ಲಿ ಒಂದು ಭಾಗವು ಈ ತೆರಿಗೆಯಿಂದ ಸಂದಾಯವಾಗುತ್ತದೆ. ಸಾಮಾನ್ಯವಾಗಿ ನೂರು ಪೌಂಡುಗಳಿ ಗಿಂತ ಹೆಚ್ಚಾದ ಆಸ್ತಿಯನ್ನು ಬಿಟ್ಟು ಸತ್ತ ಸಂದರ್ಭಗಳಲ್ಲಿ ಈ ವಿಧದ ತೆರಿಗೆಯನ್ನು ವಿಧಿಸುತ್ತಾರೆ. ಆಸ್ತಿ ಹೆಚ್ಚಾಗಿದ್ದಂತೆಲ್ಲಾ

ತೆರಿಗೆಯ ದರವೂ ಹೆಚ್ಚಾಗುತ್ತದೆ. ೩೦ ಲಕ್ಷ ಪೌಂಡುಗಳಿಗಿಂತ ಹೆಚ್ಚಾಗಿ ಆಸ್ತಿಯಿದ್ದವರ ವಾರಸುದಾರರು ಆ ಆಸ್ತಿಯನ್ನು ಪಡೆಯುವಾಗ ಸುಮಾರು ಅರ್ಧದಷ್ಟು ಆಸ್ತಿಯನ್ನೇ ಸರ್ಕಾರಕ್ಕೆ ತೆರಿಗೆಯ ರೂಪದಲ್ಲಿ ಕೊಡಬೇಕಾಗುವುದು. ಸತ್ತ ಆಸ್ತಿವಂತರಿಗೂ ಅವರ ತರುವಾಯ ಆ ಆಸ್ತಿಯನ್ನು ಅನುಭವಿಸುವವರಿಗೂ ಇರುವ ಬಾಂಧವ್ಯವು ಸಮೀಪವಾದರೆ ಸುಂಕದ ದರ ಕಡಮೆಯಾಗಿರುವುದೂ, ಸಂಬಂಧವು ದೂರದ್ದಾದರೆ ಸುಂಕದ ದರ ಹೆಚ್ಚಾಗಿರುವುದೂ ಉಂಟು.

ಪರಿಸಮಾಪ್ತಿ

ಪ್ರತಿಯೊಬ್ಬ ಪ್ರಜೆಯೂ ತನ್ನ ದೇಶದಲ್ಲಿರುವ ಇತರ ಪ್ರಜೆಗಳ ಹಿತಕ್ಕಾಗಿ ದುಡಿಯಬೇಕಾದುದೂ ತ್ಯಾಗಮಾಡಬೇಕಾದುದೂ ತನ್ನ ಕರ್ತವ್ಯವೆಂದು ಭಾವಿಸಿ ಆ ಮೂಲಕ ತಾನಿರುವ ಸಮಾಜದ ಏಳಿಗೆಗೆ ಕಾರಣಕರ್ತನಾಗುವುದು ಆವಶ್ಯಕ. ಹೀಗೆ ಪ್ರಜೆಯು ಸಮಾಜದ ಏಳಿಗೆಗೆ ಕಾರಣಭೂತನಾಗುವಂತೆ ಮಾಡಲು ಸರ್ಕಾರದ ರಚನೆಯು ನೆರವಾಗಬೇಕು. ಈ ದೃಷ್ಟಿಯಿಂದ ತೆರಿಗೆಗಳನ್ನು ನಾವು ಪರಿಶೀಲಿಸಿದರೆ ಪ್ರಜೆಗಳು ಸಲ್ಲಿಸುವ ಹಣವನ್ನು ಸುಲಿಗೆಯೆಂದು ಭಾವಿಸುವುದು ನ್ಯಾಯವಲ್ಲವೆಂಬುದು ವ್ಯಕ್ತವಾಗುತ್ತದೆ.

ಈ ಉಪನ್ಯಾಸಗಳಲ್ಲಿ ತೆರಿಗೆ ಸಿಸ್ತಿಗೆ ಸಂಬಂಧಪಟ್ಟ ಕೆಲವು ಮುಖ್ಯ ವಿಷಯಗಳ ಸ್ಥೂಲ ಪರಿಚಯವನ್ನು ಮಾಡಿಕೊಡ

ಲಾಗಿದೆ. ತೆರಿಗೆಗಳನ್ನು ವಿಮರ್ಶಿಸುವಾಗ ಗಮನದಲ್ಲಿಡಬೇಕಾದ ಕೆಲವು ಅಂಶಗಳನ್ನು ಸೂಚಿಸಲಾಗಿದೆ.

ಸರ್ಕಾರದ ವೆಚ್ಚಗಳು ಹೆಚ್ಚುತ್ತಿರುವ ಈ ಕಾಲದಲ್ಲಿ ವೆಚ್ಚಕ್ಕೆ ತಕ್ಕಷ್ಟು ಆದಾಯವನ್ನು ರೂಢಿಸಲು ಪ್ರಯತ್ನ ನಡೆಯಬೇಕು. ವೆಚ್ಚದ ಬಾಬುಗಳನ್ನು ಕಡಮೆ ಮಾಡಲು ಇರುವ ವಿಧಾನಗಳನ್ನು ಇಲ್ಲಿ ಚರ್ಚಿಸಲು ಅವಕಾಶವಿಲ್ಲ. ಆದಾಯಕರವಾದ ಒಂದೆರಡು ಹೊಸ ತೆರಿಗೆಗಳನ್ನು ಕುರಿತು ಇಲ್ಲಿ ಹೇಳಿದೆ.

ಒಟ್ಟಿನಲ್ಲಿ ಸರ್ಕಾರದ ಕಾರ್ಯಕ್ಷೇತ್ರವು ಹೆಚ್ಚಿ ಪ್ರಜಾಸಮುದಾಯದ ಉನ್ನತಿಗೆ ಅವಕಾಶವುಂಟಾಗಬೇಕಾದರೆ ಪ್ರಜೆಗಳು ತೆರಿಗೆಗಳನ್ನು ಸಲ್ಲಿಸಬೇಕು. ಹೀಗೆ ಸಲ್ಲಿಸಲು ತಮ್ಮ ಸಂಪಾದನೆಯ ಶಕ್ತಿಯನ್ನು ಹೆಚ್ಚು ಮಾಡಿಕೊಳ್ಳಬೇಕು. ಸರ್ಕಾರವೂ ಇದಕ್ಕೆ ಸಹಾಯಮಾಡಬೇಕು. ಸಮಾಜದಲ್ಲಿ ಆರ್ಥಿಕ ಸಾಮರಸ್ಯವನ್ನು ಕಲ್ಪಿಸುವುದಕ್ಕೆ ಕೂಡ ಈ ತೆರಿಗೆ ಪದ್ಧತಿಯು ಸಹಾಯಮಾಡುತ್ತದೆನ್ನಬಹುದು.

ಸರ್ಕಾರದ ಹುಟ್ಟುವಳಿ, ತೆರಿಗೆಯ ಕ್ರಮ, ವೆಚ್ಚದ ನೀತಿ, ಸಾಲದ ರೀತಿ—ಈ ವಿಧವಾಗಿ ಸರ್ಕಾರದ ಆಯವ್ಯಯ ಕ್ರಮವನ್ನು ವಿಂಗಡಿಸಿ ಆ ಬಾಬುಗಳಿಗೆ ಅನ್ವಯಿಸುವ ಸಾಮಾನ್ಯ ನಿಯಮಗಳನ್ನು ಪ್ರತ್ಯೇಕವಾಗಿ ತಿಳಿಸುವುದು ವಾಡಿಕೆ. ಹೀಗೆ ಸೂಚಿಸುವ ನಿಯಮಗಳನ್ನೇ ಒಂದು ಅಳತೆಕಡ್ಡಿಯಾಗಿಟ್ಟುಕೊಂಡು ದೇಶದ ವೆಚ್ಚದ ಕ್ರಮ ಸರಿಯಾಗಿದೆಯೇ ಇಲ್ಲವೇ ಎಂದಾಗಲಿ, ಸಾಲದ ಕಟ್ಟುಕಟ್ಟಳೆಗಳು ಶಾಸ್ತ್ರಸಮ್ಮತವಾಗಿದೆಯೇ ಇಲ್ಲವೇ ಎಂದಾಗಲಿ ತಿಳಿಯುವುದು ಸಾಧ್ಯ. ಆದರೂ ಈ ಭಾಗಗಳೆಲ್ಲಾ ಒಂದಕ್ಕೊಂದು ಹೊಂದಿಕೊಂಡಿವೆ ಎಂಬಂಶವನ್ನು ಮರೆಯಬಾರದು. ತೆರಿಗೆಯ ಪದ್ಧತಿ ಸಮರ್ಪಕವಾಗಿ

ದೆಯೋ ಇಲ್ಲವೋ ಎಂದು ತಿಳಿಯಲು ಸರ್ಕಾರದ ಆಯವ್ಯಯ ಮತ್ತು ಸಾಲಸೋಲದ ರೀತಿನೀತಿಗಳ ಪರಿಚಯವೂ ದೇಶದ ಸಂಪದಭಿವೃದ್ಧಿ ಕಾರ್ಯಗಳಿಗೆ ಸಂಬಂಧಪಟ್ಟ ಸಂಗತಿಗಳ ಪರಿಚಯವೂ ಆವಶ್ಯಕವಾಗುವುದು.

ಕೆಲವು ದಿನಗಳ ಹಿಂದೆ ಮದರಾಸು ಶಾಸನಸಭೆಯಲ್ಲಿ ನಡೆದ ವ್ಯಾಪಾರ ತೆರಿಗೆಯ ಮೇಲಿನ ಚರ್ಚೆಗೆ ಉತ್ತರವಾಗಿ ಮದರಾಸಿನ ಪ್ರಧಾನಮಂತ್ರಿಗಳು ಹೇಳಿದ ಮಾತುಗಳು ಗಮನಾರ್ಹವಾದುವು. ಸರ್ಕಾರದ ದಾಹವನ್ನು ನೀಗುವ ನೀರಿಗೆ ಅವರು ತೆರಿಗೆಯನ್ನು ಹೋಲಿಸಿದರು. ದಾಹ ಹೋಗಬೇಕಾಗಿದ್ದರೆ ಒಂದು ಲೋಟದಷ್ಟು ನೀರು ಸಾಕಾಗಬಹುದು. ಆದರೆ ಒಂದು ಲೋಟವನ್ನು ಬಾವಿಯೊಳಗೆ ಬಿಟ್ಟು ಅಷ್ಟೇ ನೀರನ್ನು ಯಾರೂ ಸೇದುವುದಿಲ್ಲ. ನಮ್ಮ ದಾಹವನ್ನು ನೀಗಿಕೊಳ್ಳಬೇಕಾದರೆ ಒಂದು ಕೊಡವನ್ನು ಬಿಟ್ಟು ನೀರುಪಡೆದು ಬೇಕಾದಷ್ಟು ನೀರನ್ನು ಉಪಯೋಗಿಸಿಕೊಂಡು ಉಳಿದುದನ್ನು ಬೇರೆ ಉಪಯೋಗಕ್ಕೆ ಇಟ್ಟುಕೊಳ್ಳುವಂತೆ, ಹೆಚ್ಚು ಜನಗಳಿಗೆ ತೊಂದರೆಯಿಲ್ಲದ ತೆರಿಗೆಯಿಂದ ಹೆಚ್ಚು ಹಣ ಬಂದರೆ ಆವಶ್ಯಕವಾದ ವೆಚ್ಚಗಳಿಗೆ ಅದನ್ನು ಉಪಯೋಗಿಸಿಕೊಂಡು ಉಳಿದ ಹಣವನ್ನು ಪ್ರಜಾ ಸೌಕರ್ಯಗಳಿಗಾಗಿಯೇ ವೆಚ್ಚಮಾಡಬಹುದು.

ತೆರಿಗೆ ಜನರಿಂದ ಬಂದು ಜನರ ಪ್ರಯೋಜನಕ್ಕಾಗಿಯೇ ವ್ಯಯವಾಗುವ ಹಣ. ಸರ್ಕಾರವು ಪ್ರಜೆಗಳಿಂದ ತೆರಿಗೆಯನ್ನು ಪಡೆದು "ಕೆರೆಯ ನೀರನ್ನು ಕೆರೆಗೆ ಚೆಲ್ಲುವಂತೆ" ಪ್ರಜಾಹಿತಕ್ಕಾಗಿ, ಸಮಾಜದ ಅಭ್ಯುದಯಕ್ಕಾಗಿ ವೆಚ್ಚಮಾಡುತ್ತದೆ ಎಂಬುದನ್ನು ನಾವು ಗಮನದಲ್ಲಿಡಬೇಕು.

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರೋಪನ್ಯಾಸಮಾಲೆ

೧. ಖಗೋಳಶಾಸ್ತ್ರ ಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.

೨. ಸಮಾಜದ ರೋಗರುಜಿನಗಳು—ಜಿ. ಹನುಮಂತ ರಾವ್, ಎಂ.ಎ.

೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.

೪. ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.

೫. ನಮ್ಮ ಹಳ್ಳಿಗಳು—ಜಿ. ಎಸ್. ಕೃಷ್ಣಮೂರ್ತಿ, ಎಂ.ಎ.